ದಾವಣಗೆರೆ ನಗರವಾಣಿ
ಸುವರ್ಣ ಮಹೋತ್ಸವ ವರ್ಷದಲ್ಲಿ
53 ನೇ ವರ್ಷಕ್ಕೆ ಪಾದಾರ್ಪಣೆ
1973-2025

ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಹಾವೇರಿ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಕನ್ನಡ ದೈನಿಕ

# ನಗರವಾಣಿ
ದಾವಣಗೆರೆ

ಸಂಸ್ಥಾಪಕ ಸಂಪಾದಕರು: ಸಿ.ಕೇಶವಮೂರ್ತಿ ಪ್ರಧಾನ ಸಂಪಾದಕರು: ಡಾ|| ಸಿ.ಕೆ.ಜಯಂತ್ ಸಹ ಸಂಪಾದಕರು: ಬಿ.ಎನ್.ಮಲ್ಲೇಶ್

ಸಂಪುಟ: 53 ಸಂಚಿಕೆ: 159 DEVANGERE E mail: website: nagaravani.com dngrvani@gmail.com ರಿ.ನಂ.24916/73 KA/SK/DVG -012/2023-25 ಸೋಮವಾರ, ಅಕ್ಟೋಬರ್ 27, 2025 ದೂರವಾಣಿ: 08192-254186 ಬೆಲೆ: 3.00 ರೂ. ಪುಟಗಳು-4

ನಗರವಾಣಿ
ವರದಿಗಾರರು ಬೇಕಾಗಿದ್ದಾರೆ
ಕನ್ನಡ ಭಾಷೆಯ ಮೇಲೆ ಪ್ರಭುತ್ವ ಇರುವ, ಪತ್ರಿಕೋದ್ಯಮದಲ್ಲಿ ಅನುಭವ ಇರುವವರು ದಾವಣಗೆರೆ ನಗರವಾಣಿ ಪತ್ರಿಕೆಯಲ್ಲಿ ಕೆಲಸ ಮಾಡಲು ವರದಿಗಾರರಾಗಿ ಬೇಕಾಗಿದ್ದಾರೆ. ಸಂಜೆ ಮತ್ತು ರಾತ್ರಿ ಕೆಲಸ ಮಾಡುವ ಪುರುಷರಿಗೆ ಆದ್ಯತೆ
ಸಂಪರ್ಕಿಸಿ: 9844060736

### ಸಿದ್ದರಾಮಯ್ಯ ಪುನಾರಚನೆ ಮಾಡದಿದ್ರೆ ರಾಜಕೀಯ ಸ್ಥಿತ್ಯಂತರ ಗ್ಯಾರಂಟಿ

## ಸಂಪುಟ ಪುನಾರಚನೆ ಯಾರು ಮಾಡ್ತಾರೋ ಅವರೇ ಮುಖ್ಯಮಂತ್ರಿಯಾಗಿ ಇರ್ತಾರೆ: ರಾಜಣ್ಣ



ತುಮಕೂರು: ಸಂಪುಟ ಪುನಾರಚನೆ ಯಾರು ಮಾಡುತ್ತಾರೋ ಅವರೇ ಸಿಎಂ ಆಗಲಿದ್ದಾರೆ ಅಥವಾ ಮುಂದುವರಿಯಲಿದ್ದಾರೆ ಎಂದು ಮಾಜಿ ಸಚಿವ ಕೆ.ಎನ್ ರಾಜಣ್ಣ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ ಮಾತನಾಡಿದ ರಾಜಣ್ಣ, ಸಿಎಂ ಸಿದ್ದರಾಮಯ್ಯರಿಗೆ ಸಂಪುಟ ಪುನಾರಚನೆ ಮಾಡಲು ಹೈಕಮಾಂಡ್ ಒಪ್ಪಿಗೆ ಕೊಟ್ಟರೆ ಸಿದ್ದರಾಮಯ್ಯನವರೇ 5 ವರ್ಷ ಸಿಎಂ ಆಗಿ ಮುಂದುವರೆಯೋದು ಖಚಿತ. ಇಲ್ಲ ಅಂದರೆ ರಾಜಕೀಯದಲ್ಲಿ ಯಾವುದೇ ಬೆಳವಣಿಗೆ ನಡೆಯಬಹುದು ಎಂದು ರಾಜಣ್ಣ ಪರೋಕ್ಷವಾಗಿ ನವೆಂಬರ್ ಕ್ರಾಂತಿ ಬಗ್ಗೆ ಸುಳಿವು ಕೊಟ್ಟಿದ್ದಾರೆ.

ಎಲ್ಲವೂ ಬಿಹಾರ ಚುನಾವಣೆ ಫಲಿತಾಂಶದ ಬಗ್ಗೆ ನಡೆಯಲಿದೆ. ಅಲ್ಲಿಯವರೆಗೂ ಯಾವುದೇ ಬೆಳವಣಿಗೆ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಈ ಮೂಲಕ ಸಿಎಂ ಸಿದ್ದರಾಮಯ್ಯರೇ ಮುಂದುವರಿಯಬಹುದೂ ಅನ್ನೋದನ್ನು ರಾಜಣ್ಣ ಪರೋಕ್ಷವಾಗಿ ಹೇಳಿದ್ದಾರೆ.

ಮುಂದಿವರಿದು ಮಾತನಾಡಿದ ರಾಜಣ್ಣ ಅವರು, ಸಂಪುಟ ಪುನಾರಚನೆ ಆಗಲಿದೆ. ಇನ್ಮುಂದೆ ಗ್ರಾಮ ಪಂಚಾಯತಿ, ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಮೀಸಲಾತಿ ಇರುವಂತೆ. ಓಬಿಸಿಗಳಿಗೆ ಲೋಕಸಭೆ, ವಿಧಾನಸಭೆ ಚುನಾವಣೆಗಳಲ್ಲಿ ಮೀಸಲಾತಿ ಕೊಡಬೇಕು. ಎಸ್ಸಿ-ಎಸ್ಟಿ ಮೀಸಲು ಕ್ಷೇತ್ರ ಇರುವಂತೆ ಓಬಿಸಿ ಮೀಸಲು ಕ್ಷೇತ್ರ ಕೊಡಬೇಕು. ಕೇಂದ್ರ ಸರ್ಕಾರ ಈ ಬಗ್ಗೆ ಗಂಭೀರವಾಗಿ ಚಿಂತಿಸಬೇಕು ಎಂದು ಆಗ್ರಹಿಸಿದ್ದಾರೆ.

ಸರ್ಕಾರ ಎರಡೂವರೆ ವರ್ಷದ ಹೊಸ್ತಿಲಿನಲ್ಲಿರುವಾಗ ಸಂಪುಟ ಪುನಾರಚನೆ ವಿಚಾರ ಪುಷ್ಟಿ ಪಡೆದುಕೊಳ್ಳುತ್ತಿದೆ. ಬಿಹಾರ ಫಲಿತಾಂಶ ಬಳಿಕ ಪುನಾರಚನೆ ಖಚಿತ ಎಂದು ಖುದ್ದು ಸಿಎಂ ಸಿದ್ದರಾಮಯ್ಯ ಸುಳಿವು ನೀಡಿದ್ದಾರೆ. ಆದರೆ ಪುನಾರಚನೆ ಕಸರತ್ತಿಗೆ ಪವರ್ ಶೇರ್ ಪಾಲಿಟಿಕ್ಸ್ ಮೂಲಕ ತಡೆ ಹಾಕುವ ಪ್ರಯತ್ನಗಳೂ ಸದ್ದಿಲ್ಲದೇ ನಡೆಯುತ್ತಿದೆ.

ರಾಜ್ಯ ಕಾಂಗ್ರೆಸ್ ಪಾಳಯದಲ್ಲಿ ನಾಯಕತ್ವ ಬದಲಾವಣೆ ಚರ್ಚೆ ನಡುವೆ ಸಂಪುಟ ಪುನಾರಚನೆ ಜಪ ಶುರುವಾಗಿದೆ. ನವೆಂಬರ್-ಡಿಸೆಂಬರ್‌ನಲ್ಲಿ ನಡೆಯಲಿದೆ ಎನ್ನಲಾದ ಕುರ್ಚಿ ಕಚ್ಚಾಟಕ್ಕೆ ಸಿಎಂ ಸಿದ್ದರಾಮಯ್ಯ ಪುನಾರಚನೆ ದಾಳ ಮೂಲಕ ಸೆಡ್ಡು ಹೊಡೆದಿದ್ದಾರೆ. ಶನಿವಾರ ಮಾತಾಡಿದ ಸಿಎಂ ಸಿದ್ದರಾಮಯ್ಯ, ಬಿಹಾರ ಫಲಿತಾಂಶ ಬಳಿಕ ಸಂಪುಟ ಪುನಾರಚನೆ ಖಚಿತ ಎಂಬ ಸಂದೇಶ ನೀಡಿದ್ದಾರೆ. ಮೂರ್ನಾಲ್ಕು ತಿಂಗಳ ಮೊದಲೇ ಹೈಕಮಾಂಡ್ ಪುನಾರಚನೆಗೆ ಸೂಚಿಸಿತ್ತು. ಎರಡೂವರೆ ವರ್ಷ ಆಗಲಿ ಎಂದು ನಾನೇ ಹೇಳಿದ್ದೆ ಎಂದು ಸಿಎಂ ಹೇಳಿದ್ದು, ಈ ವರ್ಷಾಂತ್ಯಕ್ಕೆ ಪುನಾರಚನೆ ಪಕ್ಕಾ ಎಂಬ ಸುಳಿವು ಕೊಟ್ಟಿದ್ದಾರೆ. (2ನೇ ಪುಟಕ್ಕೆ)

## ದ. ಭಾರತ ಮಟ್ಟದ ಖೋ ಖೋ ಪಂದ್ಯಾವಳಿ ಕರ್ನಾಟಕ, ಕೇರಳ ತಂಡಗಳು ಪ್ರಥಮ



ದಾ.ನಗರವಾಣಿ ಸುದ್ದಿ

ದಾವಣಗೆರೆ.ಅ.26: ನಗರದಲ್ಲಿ ಜಿಲ್ಲಾ ಕ್ರೀಡಾಂಗಣದಲ್ಲಿ ಮುಕ್ತಾಯಗೊಂಡ ದಕ್ಷಿಣ ಭಾರತ ಮಟ್ಟದ 31 ನೇ ಖೋ ಖೋ ಪಂದ್ಯಾವಳಿಯ ಮಹಿಳೆಯರ ವಿಭಾಗದಲ್ಲಿ ಕರ್ನಾಟಕ ಮೊದಲ ಸ್ಥಾನ ಪಡೆದರೆ, ಪುರುಷರ ವಿಭಾಗದಲ್ಲಿ ಕೇರಳ ತಂಡ ಮೊದಲ ಸ್ಥಾನ ಪಡೆದಿದೆ.

ಭಾನುವಾರ ಸಂಜೆ ಮುಕ್ತಾಯಗೊಂಡ ಪಂದ್ಯಾವಳಿಯ ಮಹಿಳೆಯರ ವಿಭಾಗದಲ್ಲಿ ಕರ್ನಾಟಕದ ಮಹಿಳೆಯರು ಮೊದಲ ಸ್ಥಾನಗಳಿಸಿದರೆ ಕೇರಳ ತಂಡ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಟೂರ್ನಿಯಲ್ಲಿ ತಮಿಳು ನಾಡು ತಂಡ ಮೂರನೇ ಸ್ಥಾನಕ್ಕೆ ತಳ್ಳಲ್ಪಟಿದೆ.

ಬೆಸ್ಟ್ ಡಿಫೆಂಡರ್ ಆಗಿ ಆಂಧ್ರ ಪ್ರದೇಶದ ಕುಮಾರಿ,ಬೆಸ್ಟ್ ಅಟ್ಯಾಕರ್ ಆಗಿ ತಮಿಳುನಾಡಿನ ಜಯಶ್ರೀ, ಆಲ್ ರೌಂಡರ್ ಆಗಿ ಕೇರಳದ ಕಾವ್ಯ ಕೃಷ್ಣನ ಬಹುಮಾನ ಪಡೆದುಕೊಂಡರು. ಉದಯೋನ್ಮುಖ ಆಟಗಾರ್ತಿಯಾಗಿ ಕರ್ನಾಟಕದ ಮಾನ್ಯ, ಒನಕೆ ಓಬವ್ವ ಪ್ರಶಸ್ತಿಗೆ ಕರ್ನಾಟಕದ ಬಿ.ಚೈತ್ರಾ ಭಾಜನರಾದರು.

ಇನ್ನು ಪುರುಷರ ವಿಭಾಗದಲ್ಲಿ ಕೇರಳ ಮೊದಲ ಸ್ಥಾನ, ಕರ್ನಾಟಕ 2 ಹಾಗೂ ಆಂಧ್ರಪ್ರದೇಶ ತಂಡ ಮೂರನೇ ಬಹುಮಾನ ಪಡೆದುಕೊಂಡಿತು. ಬೆಸ್ಟ್ ಡಿಫೆಂಡರ್ ಆಗಿ ತೆಲಂಗಾಣದ ಜೆ.ದಿನೇಶ್, ಬೆಸ್ಟ್ ಅಟ್ಯಾಕರ್ ಆಗಿ ಆಂಧ್ರಪ್ರದೇಶದ ಮಾರಿಶೆಟ್ಟಿ, ಆಲ್ ರೌಂಡರ್ ಆಗಿ ಕರ್ನಾಟಕದ ಆದಿತ್ಯ ಪಾಟೀಲ್, ಉದಯೋನ್ಮುಖ ಆಟಗಾರನಾಗಿ ತಮಿಳುನಾಡಿನ ಜೆ.ಅಲ್ಲೆನ್ಸ್ ಹೊರಹೊಮ್ಮಿದರು. ವೀರ ಮದಕರಿ ಪ್ರಶಸ್ತಿಯನ್ನು ಕೇರಳದ ಬೈಜು ತಮ್ಮದಾಗಿಸಿಕೊಂಡರು.

ವಿಜೇತರಿಗೆ ಬಹುಮಾನ ವಿತರಿಸಿದ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಮಾತನಾಡಿ, ಡಿಸೆಂಬರ್‌ಅಥವಾ ಮಾರ್ಚ್‌ನಲ್ಲಿ ದಾವಣಗೆರೆಯಲ್ಲಿ ರಾಷ್ಟ್ರಮಟ್ಟದಖೋ ಖೋ ಪಂದ್ಯಾವಳಿಯನ್ನು ಆಯೋಜಿಸಲಾಗುವುದು. ದಾವಣಗೆರೆಯಲ್ಲಿ ಪ್ರತಿಕ್ರೀಡಾಕೂಟವನ್ನು ಪ್ರೋತ್ಸಾಹಿಸುತ್ತಾ ಬಂದಿರುವ ಡಾ|| ಶಾಮನೂರು ಶಿವಶಂಕರಪ್ಪನವರು ಮತ್ತು ಎಸ್.ಎಸ್. ಮಲ್ಲಿಕಾರ್ಜುನ್‌ಅವರುಖೋ ಖೋರಾಷ್ಟ್ರಮಟ್ಟದ ಪಂದ್ಯಾವಳಿಗೂ ಸಹಕಾರ ನೀಡುವರು ಎಂದರು.

ಬಹುಮಾನ ವಿತರಣಾ ಸಮಾರಂಭದಲ್ಲಿ ಮಹಾನಗರ ಪಾಲಿಕೆ ಮಾಜಿ ಸದಸ್ಯ ಜೆ.ಎಸ್. ಮಂಜುನಾಥ್, ಕ್ರೀಡಾ ಇಲಾಖೆಯ ಶ್ರೀಹರ್ಷ, ಡಿ.ಎಸ್. ಹೇಮಂತ್, ಮಲ್ಲಿಕಾರ್ಜುನ್ ಕಬಡ್ಡಿ, ರಾಮಲಿಂಗಪ್ಪ, ರಾಜ್ಯ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ರವಿ, ಚಂದ್ರು, ಗೋಪಿ, ಕೊಟ್ರೇಶ್ ಮತ್ತಿತರರಿದ್ದರು.

## 'ಅಶ್ವಿನಿ-ಪುನೀತ್‌ರನ್ನು ಪಾಲಿಟಿಕ್ಸ್‌ಗೆ ಕರೆತರಲು ಪ್ರಯತ್ನಿಸಿದ್ದೆ, ಆದ್ರೆ ಅವ್ರು ಬರ್ಲಿಲ್ಲ': ಡಿಕೆಶಿ



ಬೆಂಗಳೂರು,ಅ.26 : ""ಪುನೀತ್ ರಾಜಕುಮಾರ್ ಅವರನ್ನು ರಾಜಕಾರಣಕ್ಕೆ ಸೆಳೆಯಲು ಅನೇಕ ಬಾರಿ ನಾನು ಪ್ರಯತ್ನಿಸಿದೆ. ಆದರೂ ಅವರು ಬರಲಿಲ್ಲ. ಸಹೋದರಿ ಅಶ್ವಿನಿ ಪುನೀತ್ ಅವರನ್ನು ಕೂಡ ನಾನು ರಾಜ-ಕಾರಣಕ್ಕೆ ಆಹ್ವಾನಿಸಿದೆ. ಅವರು ಸಹ ತಮ್ಮ ಪತಿ ಹಾದಿಯಲ್ಲೇ ನಡೆಯುವುದಾಗಿ ತಿಳಿಸಿದರೇ ವಿನಃ ರಾಜಕಾರಣಕ್ಕೆ ಬರಲಿಲ್ಲ" ಎಂದು ಹೇಳಿದರು.

"ರಾಜಕೀಯಕ್ಕೆ ಬರಲು ಅಶ್ವಿನಿ ಅವರು ತಿರಸ್ಕರಿಸಿದಾಗ, ಸಕ್ರಿಯ ರಾಜಕಾರಣ ಬೇಡ. ಆದರೆ ಮುಖ್ಯವಾಹಿನಿಯಲ್ಲಿ ಇರಿ ಅಂತ ಹೇಳಿದ್ದೆ. ಈ ವಿಚಾರವನ್ನು ಇಷ್ಟು ದಿನ ಬಹಿರಂಗ ಗೊಳಿಸಿರಲಿಲ್ಲ. ಇಂದು ತಿಳಿಸಿದ್ದೇನೆ. ರಾಮಾಯಣ ಮತ್ತು ಮಹಾಭಾರತಗಳು ಅನೇಕ ವರ್ಷಗಳಿಂದ ನಮ್ಮ ನಡುವೆ ಉಳಿದುಕೊಂಡಿವೆ. ಪುನೀತ್ ಅವರು ಮಾಡಿರುವ ಕೆಲಸಗಳು ಹೊಸ ತಂತ್ರಜ್ಞಾನದ ಮೂಲಕ ನಮ್ಮ ನಡುವೆ ಜೀವಂತವಾಗಿರುತ್ತವೆ" ಎಂದು ಉಪ ಮುಖ್ಯಮಂತ್ರಿಗಳು ತಿಳಿಸಿದರು.

ತಂತ್ರಜ್ಞಾನದ ಮೂಲಕ ಈಗ ಅಪ್ಪು ಬೆಳಕಿಗೆ ಬಂದಿದ್ದಾರೆ

"ಎಐ ತಂತ್ರಜ್ಞಾನದ ಮೂಲಕ ಭೀಮ, ಅರ್ಜುನ, ರಾಮ ಹೀಗೆ ಅನೇಕ ಪಾತ್ರಗಳನ್ನು ನೈಜತೆಗೆ ಹತ್ತಿರವಾಗುವಂತೆ ಚಿತ್ರಿಸಲಾಗುತ್ತಿದೆ. ಅದೇ ರೀತಿ ಈ ಆ್ಯಪ್‌ನಲ್ಲಿ ಬಾಲ್ಯದ ಪುನೀತ್ ಸೇರಿದಂತೆ ಇತ್ತೀಚಿನ ದಿನದವರೆಗಿನ ತನಕ ಸೃಷ್ಟಿಸಲಾಗಿದೆ. ಪುನೀತ್ ಅವರು ಕೊನೆಯುಸಿರೆಳೆದ ಸಂದರ್ಭದಲ್ಲಿ ಎಷ್ಟೊಂದು ಅಭಿಮಾನಿಗಳು ಅವರಿಗಾಗಿ ಮಿಡಿದರು. ನೂರಾರು ಪ್ರತಿಮೆಗಳನ್ನು ಸ್ಥಾಪಿಸಿದ್ದಾರೆ. ಅವರ ಹೆಸರನ್ನು ತಮ್ಮ ಮಕ್ಕಳಿಗೆ ಇಟ್ಟಿದ್ದಾರೆ. ಕತ್ತಲೆಗೆ ಹೋಗಿರುವ ಪುನೀತ್ ರಾಜ್‌ಕುಮಾರ್ ಈಗ ತಂತ್ರಜ್ಞಾನದ ಮೂಲಕ ಬೆಳಕಿಗೆ ಬಂದಿದ್ದಾರೆ" ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದ್ದಾರೆ.

## ಪಾತಾಳಕ್ಕೆ ಬಿದ್ದ ಪಾಕ್ ; ಸಾಲದ ಪ್ರಮಾಣ 80 ಲಕ್ಷ ಕೋಟಿಗೆ ಏರಿಕೆ

ಇಸ್ಲಾಮಾಬಾದ್: ಆರ್ಥಿಕ ದುಸ್ಥಿತಿಗೆ ಸಿಲುಕಿರುವ ಪಾಕಿಸ್ತಾನವನ್ನ ಶೆಹಬಾಜ್ ಷರೀಫ್ ಆಡಳಿತ ಇನ್ನಷ್ಟು ಸಾಲದ ಕೂಪಕ್ಕೆ ತಳ್ಳಿದೆ. ಅಧಿಕೃತ ಅಂಕಿ ಅಂಶಗಳ ಪ್ರಕಾರ, ಪ್ರಸಕ್ತ ವರ್ಷ ಜೂನ್ ವೇಳೆಗೆ ಪಾಕಿಸ್ತಾನದ ಸಾಲದ ಮಿತಿ 2,86,832 ಶತಕೋಟಿ ಡಾಲರ್ ಅಂದ್ರೆ ಸುಮಾರು 80.6 ಲಕ್ಷ ಕೋಟಿ ಪಾಕಿಸ್ತಾನಿ ರೂಪಾಯಿಗೆ ಏರಿಕೆಯಾಗಿದೆ. ಇದು ಕಳೆದ ವರ್ಷಕ್ಕೆ ಹೋಲಿಸಿದ್ರೆ 13 ಪ್ರತಿಶತದಷ್ಟು ಹೆಚ್ಚಾಗಿದೆ.

ಹೌದು. ಪಾಕಿಸ್ತಾನದ ಹಣಕಾಸು ಸಚಿವಾಲಯ ಬಿಡುಗಡೆ ಮಾಡಿದ 2025ರ ಅಂಕಿ-ಅಂಶದ ಪ್ರಕಾರ, ಜೂನ್ 2025ರ ಅಂತ್ಯದ ವೇಳೆಗೆ ಪಾಕಿಸ್ತಾನದ ಒಟ್ಟು ಸಾಲ 80.6 ಲಕ್ಷ ಕೋಟಿ ಪಾಕಿಸ್ತಾನಿ ರೂಪಾಯಿಗಳಷ್ಟಾಗಿದೆ. ಇದರಲ್ಲಿ 54.5 ಲಕ್ಷ ಕೋಟಿ ದೇಶಿಯ ಸಾಲ, 26 ಲಕ್ಷ ಕೋಟಿ ಬಾಹ್ಯ ಸಾಲ ಇದೆ. ಅಲ್ಲದೇ ದೇಶದ ಸಾಲದ ಪ್ರಮಾಣ ಜಿಡಿಪಿಗಿಂತ 70% ಏರಿಕೆಯಾಗಿದೆ ಎನ್ನಲಾಗಿದೆ.

ಸಾಲದ ಹೊರೆ ಹೆಚ್ಚಾಗಿದ್ದೇಕೆ?

ದೇಶಿಯ ಸಾಲವು ವರ್ಷದಿಂದ ವರ್ಷಕ್ಕೆ ಶೇ.15 ರಷ್ಟು ಏರಿಕೆ-ಯಾಗುತ್ತಿದೆ. ಇದರೊಂದಿಗೆ ಬಾಹ್ಯ ಸಾಲವು ವಾರ್ಷಿಕ ಶೇ.6 ರಷ್ಟು ಹೆಚ್ಚಾಗುತ್ತಾ ಬಂದಿದೆ. ಐಎಂಎಫ್, ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ (ADB), ಇತರ ಬಹುಪಕ್ಷೀಯ ಸಂಸ್ಥೆಗಳಿಂದ ಸಂಸ್ಥೆಗಳಿಂದಲೂ ನಿಧಿಗಳು ಹರಿದುಬಂದಿದ್ದು, ಸಾಲದ ಹೊರೆ ಹೆಚ್ಚಾಗುತ್ತ ಸಾಗಿದೆ.

## ಯತೀಂದ್ರ ಮಾತು ಅಹಿಂದ ನಾಯಕತ್ವದ ಬಗ್ಗೆ, ಸಿಎಂ-ಡಿಸಿಎಂ ಸ್ಥಾನದ ಕುರಿತಲ್ಲ: ಜಾರಕಿಹೊಳಿ



ಬೆಳಗಾವಿ: ಸಿದ್ದರಾಮಯ್ಯ ನಂತರ ಅಹಿಂದ ನಾಯಕತ್ವ ವಹಿಸಿಕೊಳ್ಳಲು ಸಚಿವ ಸತೀಶ್ ಜಾರಕಿಹೊಳಿ ಸಮರ್ಥರಾಗಿದ್ದಾರೆ ಎಂದಿದ್ದ ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ಭಾರಿ ಕರ್ನಾಟಕದಲ್ಲಿ ರಾಜ್ಯ ರಾಜಕೀಯ ಚರ್ಚೆಗೆ ಗ್ರಾಸವಾಗಿದೆ. ನವೆಂಬರ್ ಮೊದಲ ದಿನಕ್ಕೆ ಇನ್ನೇನು ಕೆಲವೇ ದಿನಕ್ಕೂ ಮುನ್ನವೇ ನವೆಂಬರ್ ಕ್ರಾಂತಿ ಬಗ್ಗೆ ಭಾರಿ ಪೈಪೋಟಿ ಜೋರಾಗಿದೆ. ಈ ಬಗ್ಗೆ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟ ಮಾಹಿತಿ ನೀಡಿದ್ದಾರೆ.

ಬೆಳಗಾವಿಯಲ್ಲಿ ಮಾತನಾಡಿದ ಅವರು, ಯತೀಂದ್ರ ಸಿದ್ದರಾಮಯ್ಯನವರು ಅಹಿಂದ ನಾಯಕತ್ವದ ಬಗ್ಗೆ ಮಾತನಾಡಿದ್ದು, ಸಿಎಂ, ಡಿಸಿಎಂ ಬದಲಾವಣೆ ಅಥವಾ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬದಲಾವಣೆ ಬಗ್ಗೆ ಅಲ್ಲ. ಪಕ್ಷವೇ ಬೇರೆ, ಅಹಿಂದ ಸಂಘಟನೆಯೇ ಬೇರೆ. ಸಿಎಂ ಸ್ಥಾನಕ್ಕೂ ಅದಕ್ಕೂ ಸಂಬಂಧವಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟನೆ ನೀಡಿದ್ದಾರೆ.

ಯತೀಂದ್ರ ಅವರು ಸೈದ್ಧಾಂತಿಕವಾಗಿ ಸಿದ್ದರಾಮಯ್ಯ ಅವರ ದಾರಿಯಲ್ಲೇ ಹೋಗ್ತಾರೆ ಸತೀಶ್ ಅಂತ ಹೇಳಿದ್ದಾರೆ ಅಹಿಂದ ಪ್ರಾರಂಭ ಆದಾಗ ಸತೀಶ್ ಜಾರಕಿಹೊಳಿ ಬಹಳ ಮುಖ್ಯ ಪಾತ್ರ ವಹಿಸಿದ್ದರು.ಆ ಹಿನ್ನೆಲೆಯಲ್ಲಿ ಅವರು ಹೇಳಿದ್ದಾರೆ ಅದರಲ್ಲಿ ತಪ್ಪೇನಿದೆ ಎಂದು ಗೃಹ ಸಚಿವ ಪರಮೇಶ್ವರ್ ಅವರು ಹೇಳಿದರು. (2ನೇ ಪುಟಕ್ಕೆ)

## ಕುಮಾರಸ್ವಾಮಿಯವರನ್ನ ಮುಖ್ಯಮಂತ್ರಿ ಕುರ್ಚಿಯಲ್ಲಿ ಕೂರಿಸೋದೆ ಗುರಿ: ನಿಖಿಲ್



ರಾಮನಗರ: ಕುಮಾರಸ್ವಾಮಿ ಅವರನ್ನು ಸಿಎಂ ಕುರ್ಚಿಯಲ್ಲಿ ಕೂರಿಸೋದು ನನ್ನ ಗುರಿ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ಸ್ಥಳೀಯ ಸಂಸ್ಥೆಗಳ ಚುನಾವಣೆ ಹಿನ್ನೆಲೆ ಚನ್ನಪಟ್ಟಣದಲ್ಲಿ ಇಂದು ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್ ಕಾರ್ಯಕರ್ತರ ಸಭೆ ನಡೆಸಲಾಯಿತು. ಸಭೆಯಲ್ಲಿ ಮಾತನಾಡಿದ ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಕಾರ್ಯಕರ್ತರ ವಿರುದ್ಧ ಬೇಸರ ಹೊರಹಾಕಿದರು. ಸೊಸೈಟಿ ಚುನಾವಣೆ ಹಿನ್ನೆಲೆ ಬಣ ರಾಜಕೀಯ ಮಾಡ್ತಿದ್ದ ಕಾರ್ಯಕರ್ತರನ್ನ ತರಾಟೆಗೆ ತೆಗೆದುಕೊಂಡ ನಿಖಿಲ್, ಶಿಸ್ತಿನ ಪಾಠ ಮಾಡಿದರು.

ಸ್ಥಳೀಯ ಮುಖಂಡರ ಒತ್ತಡ-ಕ್ಕೆ ಮಣಿದು ನಾನು ಚುನಾವಣೆಗೆ ಬಂದೆ. ನಾನು ಹೇಡಿ ಅಲ್ಲ, ಸಾರ್ವಜನಿಕವಾಗಿ ಕಣ್ಣೀರು ಹಾಕಲ್ಲ, ಆದರೆ ಅವತ್ತು ಕಣ್ಣೀರು ಹಾಕಿದೆ. ಈಗ ಸೊಸೈಟಿ ಚುನಾವಣೆ ಬಗ್ಗೆ ಪ್ರಶ್ನೆ ಮಾಡ್ತಿದ್ದೀರಲ್ಲಾ. ಜಿಲ್ಲೆಯ ಜನ ನನಗೆ ಅಧಿಕಾರ ಕೊಟ್ಟಿದ್ದೀರಾ?

ನನಗೆ ಒಂದು ಬಾರಿಯಾದ್ರೂ ಆಶೀರ್ವಾದ ಮಾಡಿದ್ದೀರಾ? ಕುಮಾರಣ್ಣ 1,200 ಕೋಟಿ ಅನುದಾನ ತಂದು ಅಭಿವೃದ್ಧಿ ಮಾಡಿದ್ರು. ಆದರೆ ಇಲ್ಲಿ ಅಭಿವೃದ್ಧಿ ರಾಜಕಾರಣಕ್ಕೆ (3ನೇ ಪುಟಕ್ಕೆ)

## ಅಫ್ಘಾನ್ ಜೊತೆ 'ಓಪನ್ ವಾರ್': ಪಾಕ್ ಬೆದರಿಕೆ!

ಇಸ್ಲಾಮಾಬಾದ್: ಟರ್ಕಿ ರಾಜಧಾನಿ ಇಸ್ತಾಂಬುಲ್‌ನಲ್ಲಿ ನಡೆಯುತ್ತಿರುವ ಶಾಂತಿ ಮಾತುಕತೆಗಳು ವಿಫಲವಾದರೆ ಅಫ್ಘಾನಿಸ್ತಾನದೊಂದಿಗೆ ಓಪನ್ ವಾರ್ ಮಾಡಲು ಸಿದ್ಧರಾಗಿದ್ದೇವೆ" ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಆಸಿಫ್ ಎಚ್ಚರಿಕೆ ನೀಡಿದ್ದಾರೆ.

ವಾರಗಟ್ಟಲೇ ನಡೆದ ಮಾರಣಾಂತಿಕ ಘರ್ಷಣೆ (2ನೇ ಪುಟಕ್ಕೆ)

## ಇಂದಿನಿಂದ ಅ.31ರವರೆಗೆ ಸಂಸದರಿಂದ ನವದೆಹಲಿ ಪ್ರವಾಸ



ದಾ ನಗರವಾಣಿ ಸುದ್ದಿ

ದಾವಣಗೆರೆ: ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ ಅ.27ರ ಇಂದಿನಿಂದ ಅ.31ರವರೆಗೆ ನವದೆಹಲಿ ಪ್ರವಾಸದಲ್ಲಿರುವ ಕಾರಣ ಸಾರ್ವಜನಿಕರ ಭೇಟಿಗೆ ಲಭ್ಯವಿರುವುದಿಲ್ಲ.

ನ.1ರ ಶನಿವಾರದಂದು ನಗರಕ್ಕೆ ಹಿಂದಿರುಗಲಿದ್ದಾರೆ ಎಂದು ಅವರ ಆಪ್ತ ಸಹಾಯಕರಾದ ಹರೀಶ್ ಕೆ.ಎಲ್ ಬಸಾಪುರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುಡಿದು ವಾಹನ ಚಲಾಯಿಸುವವರು ಉಗ್ರರು ಮಾನವ ಬಾಂಬ್‌ಗಳು; ಕಮಿಷನರ್ ಸಜ್ಜನರ್



ಹೈದರಾಬಾದ್: ಕರ್ನೂಲ್ ಜಿಲ್ಲೆಯಲ್ಲಿ ನಡೆದ ಭೀಕರ ವಿ ಕಾವೇರಿ ಟ್ರಾವೆಲ್ಸ್ ಬಸ್ ಅಪಘಾತ ತೀವ್ರ ದುಃಖವನ್ನುಂಟು ಮಾಡಿತ್ತು. ಹೈದರಾಬಾದ್ ಪೊಲೀಸ್ ಆಯುಕ್ತ ಮತ್ತು ಹಿರಿಯ ಐಪಿಎಸ್ ಅಧಿಕಾರಿ ವಿಸಿ ಸಜ್ಜನರ್ ಅಪಘಾತಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿದ್ದಾರೆ. ಅಪಘಾತಕ್ಕೆ ಕಾರಣವಾದ ನಿರ್ಲಕ್ಷ್ಯದ ಬಗ್ಗೆ ಅವರು ಸಂವೇದನಾಶೀಲ ಹೇಳಿಕೆ ನೀಡಿದ್ದು ಕುಡಿದು ವಾಹನ ಚಲಾಯಿಸುವವರು ಭಯೋತ್ಪಾದಕರು ಎಂದು ಹೇಳಿದ್ದಾರೆ.

ಹೈದರಾಬಾದ್ ಸಿಪಿ ಸಜ್ಜನರ್ ಅವರು, ಕೇವಲ ಒಬ್ಬ ವ್ಯಕ್ತಿಯ ನಿರ್ಲಕ್ಷ್ಯದಿಂದಾಗಿ 20 ಅಮಾಯಕರ ಜೀವಗಳನ್ನು ಬಲಿ ತೆಗೆದುಕೊಂಡಿದೆ ಎಂದು ತಮ್ಮ ದುಃಖವನ್ನು ವ್ಯಕ್ತಪಡಿಸಿದರು. ಮೃತರು ಮತ್ತು ಅವರ ಕುಟುಂಬಗಳು ಅನುಭವಿಸುತ್ತಿರುವ ಮಾನಸಿಕ ಯಾತನೆಯನ್ನು ಅವರು ಉಲ್ಲೇಖಿಸಿದರು. ಕುಡಿದು ವಾಹನ ಚಲಾಯಿಸುವವರು ಮಾನವ ಬಾಂಬ್‌ಗಳು ಎಂದು ಹೇಳಿದ್ದಾರೆ.

ಮದ್ಯದ ಅಮಲಿನಲ್ಲಿ ತಮ್ಮ ವಾಹನಗಳಲ್ಲಿ ರಸ್ತೆಗೆ ಬಂದು ಅಮಾಯಕರ ಜೀವವನ್ನು ತೆಗೆಯುವವರು, ಭಯೋತ್ಪಾದಕರು ಮತ್ತು ಮಾನವ ಬಾಂಬ್‌ಗಳಲ್ಲದಿದ್ದರೆ ಅವರು ಇನ್ನೇನು ಎಂದು ಪ್ರಶ್ನಿಸಿದರು. ನಿಮ್ಮ ಮಸ್ತಿಗಾಗಿ ನೀವು ಇತರರ ಜೀವವನ್ನು ತೆಗೆದುಕೊಳ್ಳುತ್ತೀರಾ? (2ನೇ ಪುಟಕ್ಕೆ)

## ಸಿದ್ದರಾಮಯ್ಯ ನಂತರ ಕುರುಬ ಸಮಾಜಕ್ಕೆ ನಾಯಕರೇ ಇಲ್ಲದಂತಾಗಿದೆ: ಶರಣಪ್ಪ




ದಾವಣಗೆರೆ.ಅ.26: ಸಿದ್ದರಾಮಯ್ಯನವರ ನಂತರ ಕುರುಬ ಸಮಾಜದ ಎರಡನೇ ಹಂತದ ನಾಯಕರು ಯಾರೂ ಮುಂಚೂಣಿಗೆ ಬರುತ್ತಿಲ್ಲ ಎಂಬ ಬೇಸರ ಸಮಾಜಕ್ಕೆ ಕಾಡುತ್ತಿದೆ ಎಂದು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲದಾಪುರ ಹೇಳಿದರು.


ಭಾನುವಾರ ನಗರದ ಕುವೆಂಪು ಕನ್ನಡ ಭವನದಲ್ಲಿ ಹಾಲುಮತ ಮಹಾಸಭಾದಿಂದ ಏರ್ಪಡಿಸಿದ್ದ ನೀವೂ ನಾಯಕರಾಗಿ ರಾಜಕೀಯ ಚಿಂತನ-ಮಂಥನ ಸಭೆಯಲ್ಲಿ ಮುಖ್ಯ ಅತಿಥಿ-ಯಾಗಿ ಅವರು ಮಾತನಾಡಿದರು.

ಸಿದ್ದರಾಮಯ್ಯನವರು ರಾಜ್ಯದ ಮುಖ್ಯಮಂತ್ರಿಯಾದ ನಂತರ ಕುರುಬ ಸಮಾಜಕ್ಕೆ ಸಾಕಷ್ಟು ಅನುಕೂಲವಾಗಿದೆ. ಕರ್ನಾಟಕಕ್ಕೆ ಎರಡು ಬಾರಿ ಮುಖ್ಯಮಂತ್ರಿಯನ್ನು ಕೊಟ್ಟ ಹೆಗ್ಗಳಿಕೆ ಕುರುಬ ಸಮಾಜಕ್ಕೆ ಇದೆ. ಆದರೆ ಸಮಾಜದಲ್ಲಿ ಎರಡನೇ ಹಂತದ ನಾಯಕರು ಮುಂಚೂಣಿಗೆ ಬರುತ್ತಿಲ್ಲವೆಂಬ ಬೇಸರ, ನೋವು ಕಂಡುಬರುತ್ತಿದೆ. ಹಾಗಾಗಿ ಕುರುಬ ಸಮುದಾಯದವರು ಸಿದ್ದರಾಮಯ್ಯ ನಂತರ ಇನ್ಯಾರು? ಎಂಬ ಚಿಂತೆ ಕೈಬಿಟ್ಟು, ಸಮಾಜ ಸಂಘಟನೆಯಲ್ಲಿ ತೊಡಗಬೇಕು ಎಂದು ಕರೆ ನೀಡಿದರು.

ಕರ್ನಾಟಕದ ಜನಸಂಖ್ಯಾಬಲದಲ್ಲಿ ಮುಂದಿರುವ ಕುರುಬ ಸಮುದಾಯ ಮನಸ್ಸು ಮಾಡಿದರೆ ಬೇಕಾದ್ದನ್ನು ಸಾಧಿಸಬಹುದು. ಈ ಹಿನ್ನೆಲೆಯಲ್ಲಿ ಸಮಾಜ ಬಾಂಧವರು ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳಬೇಕು. ಮುಂಬರುವ ಚುನಾವಣೆಗಳಲ್ಲಿ ಪಕ್ಷಾತೀತವಾಗಿ ಸಮಾಜದ ನಾಯಕರನ್ನು ಬೆಂಬಲಿಸಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಹಾಸಭಾ ರಾಜ್ಯ ಸಂಚಾಲಕ ರಾಜು ಮೌರ್ಯ, ನಮ್ಮಲ್ಲಿ ಒಳಪಂಗಡಗಳ ಗೊಂದಲ ಇಲ್ಲದ ಕಾರಣ ಜಾತಿ ಗಣತಿ ವರದಿಯಲ್ಲಿ ಕುರುಬ ಸಮುದಾಯವು ರಾಜ್ಯದಲ್ಲೇ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ಸಮಾಜವಾಗಿ ಹೊರಹೊಮ್ಮುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಸಮಾಜದ ಬೆಂಬಲದೊಂದಿಗೆ ಸ್ಥಾನಮಾನ ಅನುಭವಿಸಿದವರು ಇತರೆ ನಾಯಕರನ್ನು ಬೆಳೆಸಲು ಮುಂದಾಗುತ್ತಿಲ್ಲ. ಹೀಗಾಗಿ ಕುರುಬ ಸಮುದಾಯವು ಸಂಖ್ಯೆಯಲ್ಲಿ ಮುಂದಿದ್ದರೂ, ರಾಜಕೀಯ ಹಾಗೂ ಸಾಮಾಜಿಕವಾಗಿ ತೀರಾ ಹಿಂದುಳಿದಿದೆ ಎಂದರು. (2ನೇ ಪುಟಕ್ಕೆ)

## ಸಲ್ಮಾನ್ ಖಾನ್ ಈಗ ಉಗ್ರ: ಪಾಕ್ ಘೋಷಣೆ



ಇಸ್ಲಾಮಾಬಾದ್: ಬಲೂಚಿಸ್ತಾನ್ ಪರ ಮಾತನಾಡಿದ್ದಕ್ಕೆ ಬಾಲಿವುಡ್ ನಟ ಸಲ್ಮಾನ್ ಖಾನ್ ಅವರಿಗೆ ಪಾಕಿಸ್ತಾನವು 'ಭಯೋತ್ಪಾದಕ' ಎಂಬ ಹಣಪಟ್ಟಿ ಕಟ್ಟಿದೆ.

ಬಾಲಿವುಡ್ ಸೂಪರ್‌ಸ್ಟಾರ್ ಸಲ್ಮಾನ್ ಖಾನ್ ಇತ್ತೀಚೆಗೆ ರಿಯಾದ್‌ನಲ್ಲಿ ನಡೆದ ಜಾಯ್ ಫೋರಮ್ 2025 ರಲ್ಲಿ ಭಾರತೀಯ (3ನೇ ಪುಟಕ್ಕೆ)

SSIMS
SPARSH ORTHOPAEDICS • PLASTIC • NEURO SCIENCES
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಕೀಲು ಮರುಜೋಡಣೆ
- ಮೊಣಕಾಲು ನೋವು
- ಹಿಪ್ ಮರುಜೋಡಣೆ
- ಭುಜದ ನೋವು
- ರಿವಿಷನ್ ಶಸ್ತ್ರಚಿಕಿತ್ಸೆ
- ಸ್ಪೋರ್ಟ್ಸ್ ಇಂಜುರೀಸ್
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ


ದಿನಾಂಕ: ಮಂಗಳವಾರ, 28ನೇ ಅಕ್ಟೋಬರ್, 2025 | ಸಮಯ: ಬೆಳಿಗ್ಗೆ 9:00 ರಿಂದ ಮಧ್ಯಾಹ್ನ 1:30 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

# ಕಾನಿಪ ಜಿಲ್ಲಾ ಸಂಘದ ಚುನಾವಣೆ: ಅಧ್ಯಕ್ಷ ಸ್ಥಾನದ ಅಭ್ಯರ್ಥಿ ರವಿಕುಮಾರ್ ತಂಡದಿಂದ ಮತಯಾಚನೆ




ದಾ.ನಗರವಾಣಿ ಸುದ್ದಿ


ಜಗಳೂರು, : ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಮಟ್ಟದ ಪದಾಧಿಕಾರಿಗಳ ಆಯ್ಕೆ ಚುನಾವಣೆಯಲ್ಲಿ ರವಿಕುಮಾರ್ ಅವರ ತಂಡಕ್ಕೆ ಬೆಂಬಲಿಸಿ ಎಂದು ಹಿರಿಯ ಪತ್ರಕರ್ತ ಏಕಾಂತಪ್ಪ ಮನವಿ ಮಾಡಿದರು.

ಗುರುವಾರ ಪಟ್ಟಣದ ಪತ್ರಿಕಾ ಭವನದಲ್ಲಿ ಕಾ.ನಿಪ ಸಂಘದ ಚುನಾವಣೆ ಹಿನ್ನೆಲೆ ಅಭ್ಯರ್ಥಿಗಳ ಪರ ಅವರ ತಂಡ ಮತಯಾಚಿಸಿದರು. ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಜಿಲ್ಲಾ ಕಾರ್ಯನಿರತ ಸಂಘದ ಉತ್ತಮ ಆಡಳಿತ ಕಾರ್ಯವೈಖರಿಯಿಂದ ಪತ್ರಕರ್ತರ ರಾಜ್ಯಸಮ್ಮೇಳನ ಅದ್ದೂರಿಯಾಗಿ ಜರುಗಿತು. ಜಿಲ್ಲಾ ಸಂಘದ ಪತ್ರಕರ್ತರ ಭವನದ ನಿವೇಶನ, ಇತರೆ ಸೌಲಭ್ಯಗಳು ಸಿಕ್ಕಿವೆ. ಯಾವುದೇ ವೈಮನಸ್ಸುಗಳಿಲ್ಲ ಆದರೂ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ನಾವು ಬೇರೊಂದು ತಂಡವನ್ನು ರಚಿಸಿ ಚುನಾವಣೆ ನಡೆಸುವ ಅನಿವಾರ್ಯತೆ ಎದುರಾಗಿದೆ. ನಾವೇ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯನ್ನು ಆಯ್ಕೆ ಮಾಡಿದ್ದೇವೆ. ದಾವಣಗೆರೆ ಕನ್ನಡಿಗ ಪತ್ರಿಕೆ ಸಂಪಾದಕ ರವಿಕುಮಾರ್ ಅವರು ಕಳೆದ ಬಾರಿ ಅಧ್ಯಕ್ಷ ಸ್ಥಾನಕ್ಕೆ ಕೆಲವೇ ಮತಗಳಿಂದ ಸೋಲನುಭವಿಸಿದ್ದರು. ಈ ಬಾರಿ ಬಹುಮತಗಳಿಂದ ಆಯ್ಕೆ ಮಾಡಲು ಸಹಕರಿಸಬೇಕು ಎಂದರು.

ಕಾ.ನಿ.ಪ ಸಂಘದ ತಾಲ್ಲೂಕು ಅಧ್ಯಕ್ಷ ಜಿ.ಎಸ್. ಚಿದಾನಂದಪ್ಪ ಮಾತನಾಡಿ, ಜಗಳೂರು ಪತ್ರಕರ್ತರು ಸಂಘದ ನಿಯಮ ಪಾಲಿಸುತ್ತಾ ಒಗ್ಗಟ್ಟಾಗಿದ್ದೇವೆ. ನಮ್ಮ ಬಗ್ಗೆ ಯಾವುದೇ ಗೊಂದಲಗಳಿಲ್ಲ. ಒಮ್ಮತದಿಂದ ಜಿಲ್ಲಾ ಸಂಘಕ್ಕೆ ಸೂಚಿಸಿದ ಇಬ್ಬರನ್ನು ತಾವು ಸ್ಪರ್ಧೆಗೆ ಅವಕಾಶ ನೀಡಬೇಕು. ನಮಗೆ ಯಾರು ಸ್ಪಂದಿಸುತ್ತಾರೋ ಅವರಿಗೆ ಬೆಂಬಲವಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂಘದ ಮಾಜಿ ಜಿಲ್ಲಾ ಕಾರ್ಯದರ್ಶಿ ಫಕ್ರುದ್ದೀನ್, ಪತ್ರಕರ್ತರಾದ ನಿಂಗೋಜಿ ರಾವ್, ಚನ್ನವೀರಯ್ಯ, ಗುರುಮೂರ್ತಿ ಹೈದರಾಲಿ, ಮಂಜುನಾಥ್, ಉಮೇಶ್, ಸೇರಿದಂತೆ ತಾಲ್ಲೂಕು ಪತ್ರಕರ್ತರ ಸಂಘದ ಕಾರ್ಯದರ್ಶಿ ಲೋಕೇಶ್, ಪದಾಧಿಕಾರಿಗಳಾದ ಜಗದೀಶ್, ರವಿಕುಮಾರ್ ವಾಸೀಂ, ಬಸವರಾಜ್, ಎಚ್.ಆರ್,ಬಾಬುಮರೇನಹಳ್ಳಿ, ಸೋಮನಗೌಡ, ರಾಜಪ್ಪ ವ್ಯಾಸಗೊಂಡನಹಳ್ಳಿ, ಮಾದಿಹಳ್ಳಿ ಮಂಜಪ್ಪ, ಸತೀಶ್, ಜೀವನ್, ಮಾರುತಿ, ಸಿದ್ದಮ್ಮನಹಳ್ಳಿ ಬಸವರಾಜ್, ಸಂದೀಪ್ ಸೇರಿದಂತೆ ಇದ್ದರು.

# ನಿರ್ಭಯದಿಂದ ಮುನ್ನಡೆದರೆ ಮಾತ್ರ ನಾಯಕರಾಗಲು ಸಾಧ್ಯ: ಜಿ.ಬಿ.ವಿನಯ್



ದಾ ನಗರವಾಣಿ ಸುದ್ದಿ

ದಾವಣಗೆರೆ: ದೇಹದಲ್ಲಿ ಭಯ ಇದ್ದರೆ ದೂರ ಉಳಿದುಬಿಡುತ್ತೇವೆ. ನೇರವಾಗಿ ಎದುರಿಸುವ ಬೆಳೆಸುವ ಶಕ್ತಿ ಬೆಳೆಸಿಕೊಂಡಿಲ್ಲ. ಇದು ದುರಂತ. ನಿರ್ಭಯದಿಂದ ಸಾಧನೆಯತ್ತ ಮುನ್ನಡೆದರೆ ಬದುಕಿನಲ್ಲಿ ನಾಯಕರಾಗಲು ಮತ್ತು ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ. ಗೆಲ್ಲುವವರೆಗೆ ನಿರಂತರ ಪ್ರಯತ್ನ ಇರಬೇಕು. ಸವಾಲಾಗಿ ತೆಗೆದುಕೊಂಡು ಮುನ್ನಡೆದವರು ಇಂದು ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ಸಾಧನೆ ಮಾಡಿದ್ದಾರೆ ಎಂದು ಇನ್ ಸೈಟ್ಸ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಜಿ. ಬಿ. ವಿನಯ್ ಕುಮಾರ್ ತಿಳಿಸಿದರು.

ದಾವಣಗೆರೆ ಜಿಲ್ಲೆಯ ಹೊನ್ನಾಳಿ – ನ್ಯಾಮತಿ ಅವಳಿ ತಾಲೂಕಿನ ಸರ್ಕಾರಿ ಪ್ರಥಮ ದರ್ಜೆ ಪದವಿ ಕಾಲೇಜಿನ ವತಿಯಿಂದ ಬಿ.ಕಾಂ, ಬಿ.ಎ ಮತ್ತು ಬಿ.ಸಿ.ಎ ವಿಭಾಗದ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಅವರು, ನಿರಂತರ ಕಲಿಕೆ, ಶಿಕ್ಷಣ, ಜ್ಞಾನ ತುಂಬಾನೇ ಮುಖ್ಯ ಎಂದು ಪ್ರತಿಪಾದಿಸಿದರು.

ದಿನಕ್ಕೆ 2 ಗಂಟೆಗಳವರೆಗೆ ಇಂಗ್ಲೀಷ್ ಪದ ಕಲಿಯಲು ಶುರು ಮಾಡಿ. ಏಕಾಗ್ರತೆ, ತನ್ಮಯತೆಯಿಂದ ಕಲಿತರೆ ಇಂಗ್ಲೀಷ್ ಭಾಷೆಯಲ್ಲಿ ಪರಿಣಿತರಾಗುವುದು ಖಚಿತ. ಮೂರು ಸಾವಿರ ಇಂಗ್ಲೀಷ್ ಪದಗಳನ್ನು ಕಲಿತರೆ ನೀವು ಇಂಗ್ಲೀಷ್ ಮಾಧ್ಯಮದವರಿಗಿಂತ ಹೆಚ್ಚು ಬುದ್ಧಿಶಾಲಿಯಾಗುತ್ತೀರಿ. ಇದು ಉತ್ಪ್ರೇಕ್ಷೆಯಲ್ಲ. ಇಂಗ್ಲೀಷ್ ಕಲಿಯಲು, ಬರೆಯುವ ಪ್ರಯತ್ನ ಮಾಡಲು ಹೋಗಲ್ಲ. ಇದೇ ನಮ್ಮ ಸಮಸ್ಯೆ. ಭಯದಿಂದಲೇ ನಮಗೆ ಏಕೆ ಬೇಕೆಂದು ದೂರ ಉಳಿಯಬಾರದು. ಧೈರ್ಯದಿಂದ ಮುನ್ನುಗ್ಗಬೇಕು ಎಂದು ಕರೆ ನೀಡಿದರು.

ಮನುಷ್ಯನ ಬುದ್ಧಿ, ಸಾಮರ್ಥ್ಯ ಮೀರಿದಂಥ ತಂತ್ರಜ್ಞಾನ ಈಗ ಬೆಳೆದಿದೆ. ರೊಬೊ ಎಲ್ಲಾ ಕೆಲಸವನ್ನೂ ಮಾಡುತ್ತವೆ. ಕೃಷಿ ಕ್ಷೇತ್ರಕ್ಕೂ ಕಾಲಿಡಲಿದೆ. ಮನುಷ್ಯಕ್ಕಿಂತ ಜಾಸ್ತಿ ರೊಬೊಟ್ಸ್ ಕೆಲಸ ಮಾಡುತ್ತವೆ. ಇನ್ನು ಮುಂದಿನ ಕೇವಲ ಹತ್ತು ವರ್ಷದಲ್ಲಿ ರೊಬೊಟ್ ಮೇಲೆ ನಾವೆಲ್ಲರೂ ಅವಲಂಬಿತರಾಗಿಬಿಡುತ್ತೇವೆ. ಅಮೆರಿಕಾದಲ್ಲಿ ಇದು ಆಗುತ್ತಿದೆ. ಇದು ವಾಸ್ತವ. ಶಿಕ್ಷಣದ ಪಠ್ಯಪುಸ್ತಕ, ಪಠ್ಯೇತರ ಪುಸ್ತಕಗಳು, ಕಲೆ, ಸಾಹಿತ್ಯ ಸೇರಿದಂತೆ ಇತರೆ ಪುಸ್ತಕ ಓದಿ ಎಂದು ಕರೆ ನೀಡಿದರು.

ಪುಸ್ತಕಗಳನ್ನು ಓದಿ ಪ್ರಪಂಚದ ಜ್ಞಾನ ತಿಳಿದುಕೊಳ್ಳಿ. ಕಾಲಕ್ಕೆ ತಕ್ಕಂತೆ ನಾವು ಬದಲಾಗಬೇಕು. ಯಾವ್ಯಾವ ಸಂದರ್ಭದಲ್ಲಿ ಏನು ಮಾಡಬೇಕೆಂಬ ಬಗ್ಗೆ ಈಗಿನಿಂದಲೇ ಚಿಂತಿಸಬೇಕು ಎಂದು ಕರೆ ನೀಡಿದರು.

ಸಂವಿಧಾನ ಪೀಠಿಕೆಯಲ್ಲಿನ ಅಂಶಗಳು ನಮಗೆ ಸಂಬಂಧವೇ ಇಲ್ಲವೆಂಬಂತೆ ನಾವು ಬದುಕುತ್ತಿದ್ದೇವೆ. ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ, ರಾಜಕೀಯ ನ್ಯಾಯ. ಸಮಾನತೆ ಮತ್ತು ಸ್ವಾತಂತ್ರ್ಯ ಕೇವಲ ಪುಸ್ತಕಕಷ್ಟೇ ಸೀಮಿತವಾಗಿದೆ. ನಮಗೆ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ ಸಿಕ್ಕಿದೆಯಾ ಎಂಬ ಪ್ರಶ್ನೆ ಹಾಕಿಕೊಳ್ಳಬೇಕಿದೆ. ಅನ್ಯಾಯದ ವಿರುದ್ಧ ಯಾವಾಗ ಮಾತನಾಡಲು ಶುರು ಮಾಡುತ್ತೇವೆಯೋ ಆಗ ನ್ಯಾಯ ಜಯಸುತ್ತೇವೆಂದರ್ಥ ಎಂದು ಅಭಿಪ್ರಾಯಪಟ್ಟರು.

ವೇದಿಕೆಯಲ್ಲಿ ಕಾಲೇಜಿನ ಪ್ರಾಂಶುಪಾಲ ಶಿವಕುಮಾರ್, ಹೊನ್ನಾಳಿ ಹಿರಿಯ ಮುಖಂಡ ರಾಜು ಕಣಗಣ್ಣನವರ್, ಯುವ ಮುಖಂಡ ದಿಡಗೂರು ಸುದೀಪ್, ಅರ್ಥಶಾಸ್ತ್ರ ಅಧ್ಯಾಪಕ ರೇವಣಸಿದ್ದಪ್ಪ, ಅರ್ಥಶಾಸ್ತ್ರದ ಮುಖ್ಯಸ್ಥೆ ಡಾ. ನಮ್ರತಾ, ರಾಜ್ಯಶಾಸ್ತ್ರ ಅಧ್ಯಾಪಕ ಚಂದ್ರಪ, ಅಧ್ಯಾಪಕರಾದ ಗಿರೀಶ್, ನವೀನ್, ಗ್ರಂಥಪಾಲಕ ರಾಜಶೇಖರ ಹಾಗೂ ಕಾಲೇಜಿನ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಹಿರಿಯ ನಾಗರೀಕರಿಗೆ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆ

ದಾವಣಗೆರೆ ಅಕ್ಟೋಬರ್ 16 : ಅಕ್ಟೋಬರ್ 26 ರಂದು ಬಾಪೂಜಿ ಸ್ಕೂಲ್ ಆವರಣ, ಎಂ.ಸಿ.ಸಿ ಬಿ ಬ್ಲಾಕ್, ದಾವಣಗೆರೆ ಇಲ್ಲಿ ಹಿರಿಯ–ಕಿರಿಯರ ಸಮ್ಮಿಲನ ಕಾರ್ಯಕ್ರಮ ಪ್ರಯುಕ್ತ ಹಿರಿಯ ನಾಗರಿಕರಿಗೆ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಎಸ್. ಗುರುಮೂರ್ತಿ 6364282359, ಲಕ್ಷ್ಮಿ 7483968224, ತಿಪ್ಪೇಶ್ 9148672498 ಸಂಪರ್ಕಿಸಬಹುದೆಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ|| ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

# ಕೊಟ್ಟೂರು ಗ್ರಂಥಾಲಯದಲ್ಲಿ ರಾಣಿ ಚೆನ್ನಮ್ಮ ಜಯಂತಿ



ದಾ ನಗರವಾಣಿ ಸುದ್ದಿ

ಕೊಟ್ಟೂರು: ಪಟ್ಟಣದ ಸಾರ್ವಜನಿಕ ಗ್ರಂಥಾಲಯದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಜಯಂತಿಯನ್ನು ಆಚರಿಸಲಾಯಿತು.

ಈ ವೇಳೆ ಗ್ರಂಥಾಲಯ ಸಹಾಯಕ ಮಲ್ಲಪ್ಪ ಗುಡ್ಲಾನೂರ್, ವೀರರಾಣಿ ಚೆನ್ನಮ್ಮ ಅವರ ಜೀವನ ಚರಿತ್ರೆಯನ್ನು ತಿಳಿಸಿದರು.

ಈ ಸಂದರ್ಭದಲ್ಲಿ ಕೊಟ್ರೇಶ್, ಕೊಪ್ಪಳದ ವೀರಭದ್ರಪ್ಪ, ಬಿ ಈಶ್ವರಪ್ಪ, ಶ್ವೇತಾ ಕೆ ಎಂ, ಚಂದನಾ, ಹೆಚ್ ಮಮತಾ, ಶ್ರೀನಿವಾಸ್ ಪತ್ತಾರ್, ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳು, ಗ್ರಂಥಾಲಯ ಸದಸ್ಯರು ಇದ್ದರು.

## ಜಿಎಂ ಲೀಗ್ ಕ್ರಿಕೆಟ್ ಪಂದ್ಯಾವಳಿ

ದಾ ನಗರವಾಣಿ ಸುದ್ದಿ

ದಾವಣಗೆರೆ.ಅ.25: ನಗರದ ಜಿಎಂ ವಿಶ್ವವಿದ್ಯಾಲಯದಲ್ಲಿ ಐಪಿಎಲ್ ಮಾದರಿಯಲ್ಲಿ ಕ್ರಿಕೆಟ್ ಸೇರಿದಂತೆ ವಿವಿಧ ಕ್ರೀಡೆಗಳನ್ನು ದಿವಂಗತ ಜಿ.ಮಲ್ಲಿಕಾರ್ಜುನಪ್ಪ ಅವರ ಹೆಸರಿನಡಿ ಜಿಎಂ ಲೀಗ್ ಎಂಬುದಾಗಿ ಆಯೋಜಿಸುತ್ತ ಬಂದಿದ್ದು ಇದೇ ಅಕ್ಟೋಬರ್ 27ರಿಂದ "ಸೀಸನ್ 2" ಶುರುವಾಗುತ್ತಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ವಿಶ್ವವಿದ್ಯಾಲಯದ ನಿರ್ದೇಶಕ ಡಾ.ಹೆಚ್.ಎಸ್.ಕಿರಣ್ ಕುಮಾರ್ ಮಾತನಾಡಿ, ಸೀಸನ್ 2ಗೆ ಅಕ್ಟೋಬರ್ 27 ರಂದು ಮಧ್ಯಾಹ್ನ 2.30 ಗಂಟೆಗೆ ವಿದ್ಯುಕ್ತ ಚಾಲನೆ ಸಿಗಲಿದ್ದು, ಜಿಎಂ ವಿಶ್ವವಿದ್ಯಾಲಯದ ಕುಲಾಧಿಪತಿ ಜಿ.ಎಂ.ಲಿಂಗರಾಜು, ಕುಲಪತಿ ಡಾ.ಹೆಚ್.ಡಿ. ಮಹೇಶಪ್ಪ, ಕುಲಸಚಿವ ಡಾ.ಸುನೀಲ್ ಕುಮಾರ್ ಬಿ.ಎಸ್ ಸೇರಿದಂತೆ ಜಿಎಂಯು ನಿರ್ದೇಶಕರು, ಡೀನ್‌ಗಳು, ಪ್ರಾಧ್ಯಾಪಕರುಗಳು, ವಿದ್ಯಾರ್ಥಿಗಳು ಭಾಗವಹಿಸುವರು. ನವೆಂಬರ್ 7 ರವರೆಗೆ ಈ ಪಂದ್ಯಾವಳಿ ನಡೆಯಲಿದೆ ಎಂದರು.

ಸೀಸನ್ 2 ರಲ್ಲಿ ಬ್ಯಾಡ್ಮಿಂಟನ್, ಬ್ಯಾಸ್ಕೆಟ್ ಬಾಲ್, ಫುಟ್ ಬಾಲ್, ಕಬ್ಬಡಿ ಈ 4 ವಿವಿಧ ಕ್ರೀಡಾ ಪಂದ್ಯಾವಳಿಗಳು ನಡೆಯಲಿದ್ದು, ಒಟ್ಟು 8 ಫ್ರಾಂಚೈಸಿ ತಂಡಗಳಾಗಿ ಈ ಲೀಗ್‌ನಲ್ಲಿ ಭಾಗವಹಿಸಲಿವೆ. ಸಮಾರೋಪ ಸಮಾರಂಭ ನವೆಂಬರ್ 7 ರಂದು ಸಂಜೆ 5 ಗಂಟೆಗೆ ನಡೆಯಲಿದೆ. ಪ್ರಥಮ ಬಹುಮಾನವಾಗಿ 10 ಸಾವಿರ ನಗದು, ದ್ವಿತೀಯ ಬಹುಮಾನವಾಗಿ 7.5 ಸಾವಿರ ಹಾಗೂ ಟ್ರೋಫಿ ಮತ್ತು ಬಹುಮಾನಗಳನ್ನು ವಿತರಣೆ ಮಾಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಎಂಯು ಡಾ.ವೀರಗಂಗಾಧರ್ ಸ್ವಾಮಿ ಟಿ.ಎಂ, ಜಿ.ಬಿ. ಅಜ್ಜಯ್ಯ, ಗುರುಶಂಕರ್ ಎ.ಎಸ್., ರಾಹುಲ್ ಆರ್. ಗದಗಿಮಠ ಉಪಸ್ಥಿತರಿದ್ದರು.

## ಅಫ್ಘಾನ್ ಜೊತೆ 'ಓಪನ್ ವಾರ್'...

(1ನೇ ಪುಟದಿಂದ)

ಮತ್ತು ಕದನ ವಿರಾಮ ಉಲ್ಲಂಘನೆ ನಂತರ ಅಫ್ಘಾನ್–ಪಾಕ್ ಗಡಿಯಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆ ಮತ್ತು ವಿವಾದ ಪರಿಹರಿಸಲು ಸಭೆ ನಡೆಯುತ್ತಿರುವಂತೆಯೇ ಪಾಕಿಸ್ತಾನಯಿಂದ ಈ ರೀತಿಯ ಹೇಳಿಕೆ ಹೊರಬಿದ್ದಿದೆ.

ವರದಿಗಾರರೊಂದಿಗೆ ಮಾತನಾಡಿದ ಖವಾಜಾ ಆಸಿಫ್, ಇತ್ತೀಚಿನ ದಿನಗಳಲ್ಲಿ ಯಾವುದೇ ಘಟನೆ ಅಥವಾ ಘರ್ಷಣೆ ಸಂಭವಿಸದಿದ್ದರೂ, ದೋಹಾ ಒಪ್ಪಂದವು ಸ್ವಲ್ಪಮಟ್ಟಿಗೆ ಪರಿಣಾಮಕಾರಿಯಾಗಿದೆ ಎಂದು ಸೂಚಿಸುತ್ತದೆ ಎಂದು ಖವಾಜಾ ಹೇಳಿದ್ದಾರೆ. ಆದರೆ, ಪಾಕಿಸ್ತಾನದ ರಕ್ಷಣಾ ಸಚಿವರ ಈ ಹೇಳಿಕೆಗಳಿಗೆ ಅಫ್ಘಾನಿಸ್ತಾನ ಸರ್ಕಾರದ ಅಧಿಕಾರಿಗಳು ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂದು ಟೋಲೋ ನ್ಯೂಸ್ ಹೇಳಿದೆ

ಎರಡನೇ ಸುತ್ತಿನ ಚರ್ಚೆಗಾಗಿ ಎರಡೂ ದೇಶಗಳ ನಿಯೋಗಗಳು ಟರ್ಕಿಯಲ್ಲಿವೆ. ದೋಹಾ ಒಪ್ಪಂದವನ್ನು ಅನುಷ್ಠಾನಗೊಳಿಸುವುದು, ಗಡಿಯಾಚೆಗಿನ ದಾಳಿಗಳನ್ನು ನಿಲ್ಲಿಸುವುದು ಮತ್ತು ವಿಶ್ವಾಸವನ್ನು ಪುನರ್ ವೃದ್ಧಿಸುವ ಬಗ್ಗೆ ಮಾತುಕತೆಗಳು ನಡೆಯುತ್ತಿವೆ. ಮಾತುಕತೆಯು ನಾಲ್ಕು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಭವಿಷ್ಯದ ಹಿಂಸಾಚಾರವನ್ನು ತಡೆಗಟ್ಟಲು ಜಂಟಿ ಮೇಲ್ವಿಚಾರಣಾ ವ್ಯವಸ್ಥೆ ರಚಿಸುವುದು, ಪರಸ್ಪರರ ಸಾರ್ವಭೌಮತ್ವವನ್ನು ಖಾತ್ರಿಪಡಿಸುವುದು, ಕಳೆದ ಎರಡು ದಶಕಗಳಿಂದ ಪಾಕಿಸ್ತಾನದ ಭದ್ರತಾ ಸಮಸ್ಯೆಗಳ ಮೂಲಗಳನ್ನು ಪರಿಹರಿಸುವುದು ಮತ್ತು ವ್ಯಾಪಾರ ನಿರ್ಬಂಧಗಳನ್ನು ತೆಗೆದುಹಾಕುವುದಾಗಿದೆ.

ಅಫ್ಘಾನ್ ನಿರಾಶ್ರಿತರನ್ನು ಬಲವಂತದ ಗಡೀಪಾರು ಮಾಡುವುದನ್ನು ನಿಲ್ಲಿಸುವುದು ಮತ್ತು ನಿರಾಶ್ರಿತರ ಸಮಸ್ಯೆಯನ್ನು ರಾಜಕೀಯದಿಂದ ದೂರವಿಡುವ ಬಗ್ಗೆಯೂ ಚರ್ಚೆ ನಡೆಯುತ್ತಿದೆ. ಈ ಹಿಂದೆ ದೋಹಾ ಮಾತುಕತೆಗಾಗಿ ಪಾಕಿಸ್ತಾನದ ನೇತೃತ್ವ ವಹಿಸಿದ್ದ ಆಸಿಫ್, ಇತ್ತೀಚೆಗೆ ಗಡಿಯಲ್ಲಿ ಪರಿಸ್ಥಿತಿ ಶಾಂತವಾಗಿತ್ತು ಆದರೆ ರಾಜತಾಂತ್ರಿಕತೆ ವಿಫಲವಾದರೆ ಅದು ಶೀಘ್ರವಾಗಿ ಬದಲಾಗಬಹುದು ಎಂದು ಎಚ್ಚರಿಸಿದ್ದಾರೆ.

## ಸಿದ್ದರಾಮಯ್ಯ ನಂತರ ಕುರುಬ...

(1ನೇ ಪುಟದಿಂದ)

ಉತ್ತರ ಕರ್ನಾಟಕ ಭಾಗದಲ್ಲಿ ಕುರುಬ ಸಮುದಾಯ ಸುಮಾರು 5 ಲಕ್ಷ ಜನಸಂಖ್ಯೆ ಹೊಂದಿದ್ದರೂ, ಬೆಳಗಾವಿ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನ ದಕ್ಕಲಿಲ್ಲ. ಸ್ವಾತಂತ್ರ್ಯಾನಂತರ ಕಳೆದ 78 ವರ್ಷಗಳಿಂದ ಈವರೆಗೆ ಸಮಾಜದ 157 ಜನ ಮಾತ್ರ ಶಾಸಕರಾಗಿದ್ದಾರೆ. ಲೋಕಸಭೆ, ರಾಜ್ಯಸಭೆ, ವಿಧಾನ ಪರಿಷತ್ತಿನಲ್ಲೂ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ಸಿಗುತ್ತಿಲ್ಲ. ಅರಣ್ಯ ಪ್ರದೇಶದಲ್ಲಿ ಕುರಿಗಳನ್ನು ಮೇಯಿಸಲು ಅವಕಾಶ ಕಲ್ಪಿಸುವ ಕುರಿತಂತೆ ಸಮಾಜದ 14 ಶಾಸಕರ ಪೈಕಿ ಯಾರೊಬ್ಬರೂ ಇದುವರೆಗೂ ಸದನದಲ್ಲಿ ಮಾತನಾಡದೇ ಇರುವುದು ಬೇಸರ ತರಿಸಿದೆ ಎಂದರು.

ಶೀಘ್ರದಲ್ಲಿಯೇ ರಾಜ್ಯದ ಜಿಲ್ಲಾ ಮತ್ತು ತಾಲೂಕು ಹಾಗೂ ಗ್ರಾಮ ಪಂಚಾಯಿತಿ ಚುನಾವಣೆ ಸಮೀಪಿಸುತ್ತಿದೆ. ಈ ಹಿನ್ನೆಲೆಯಲ್ಲಿ ಚುನಾವಣೆ ತಯಾರಿ, ಸೋಷಿಯಲ್ ಮೀಡಿಯಾ, ಎಐ ಬಳಕೆ ಹಾಗೂ ಕ್ಷೇತ್ರಗಳ ಸಮಸ್ಯೆ, ಮತದಾರರನ್ನು ತಲುಪುವ ವಿಚಾರಗಳ ಕುರಿತು ಸ್ಪರ್ಧಾಕಾಂಕ್ಷಿಗಳಿಗೆ ಆತ್ಮಸ್ಥೈರ್ಯ ತುಂಬುವ ಸಲುವಾಗಿ ಈ ಕಾರ್ಯಕ್ರಮ ಏರ್ಪಡಿಸಲಾಗಿದೆ. ಎಲ್ಲಾ ರಾಜಕೀಯ ಪಕ್ಷಗಳ ಟಿಕೆಟ್ ಆಕಾಂಕ್ಷಿಗಳ ವಿವರ ಕ್ರೋಢೀಕರಿಸಿ, ಸಮಾಜದವರಿಗೆ ಟಿಕೆಟ್ ನೀಡುವಂತೆ ಆಯಾ ಪಕ್ಷಗಳ ರಾಜ್ಯಾಧ್ಯಕ್ಷರುಗಳಿಗೆ ಒತ್ತಾಯಿಸಲಾಗುವುದು ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಾಸಭಾ ರಾಜ್ಯಾಧ್ಯಕ್ಷ ರುದ್ರಪ್ಪ ಗುಳಗಳಿ, ಜಿಲ್ಲಾಧ್ಯಕ್ಷ ಸಿ.ವೀರಣ್ಣ ಹಾಲೇಕಲ್ಲು, ನಿವೃತ್ತ ಪೊಲೀಸ್ ಅಧಿಕಾರಿ ಬಿ.ಡಿ.ಮಾಳಗಿ, ಬಿಜೆಪಿ ಮುಖಂಡರಾದ ಐರಣಿ ಅಣ್ಣೇಶ, ಕೋಳೇನಹಳ್ಳಿ ಬಿ.ಎಂ.ಸತೀಶ, ಸ್ವಾಭಿಮಾನಿ ಬಳಗದ ಜಿ.ಬಿ.ವಿನಯಕುಮಾರ, ಮುಖಂಡರಾದ ಪ್ರೊ.ಯಲ್ಲಪ್ಪ, ಸುವರ್ಣ ನಾಗರಾಜ್, ದೀಟೂರು ಚಂದ್ರು, ಎಮ್ಮಿಹಟ್ಟಿ ಹನುಮಂತಪ್ಪ, ಓಂಕಾರಪ್ಪ, ದರ್ಶನ್, ವಿಜಯ್ ಕಟಗಿ, ಬಾಗಲಕೋಟೆ ರುದ್ರಪ್ಪ, ಗೋಪಾಲಪ್ಪ, ಗೂಳೆಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಕುಡಿದು ವಾಹನ ಚಲಾಯಿಸುವವರು...

(1ನೇ ಪುಟದಿಂದ) ನಿಮ್ಮ ಮೋಜು ಮತ್ತು ಮಸ್ತಿಗಾಗಿ ಇತರರ ಜೀವ ತೆಗೆಯುವ ಹಕ್ಕು ನಿಮಗೆ ಯಾರು ಕೊಟ್ಟರು? ಎಂದು ಅವರು ಪ್ರಶ್ನಿಸಿದರು. ಸಜ್ಜನರ್ ಕುಡಿದು ವಾಹನ ಚಲಾಯಿಸುವುದರಿಂದ ಉಂಟಾಗುವ ಹಾನಿ ಮತ್ತು ಅದರ ಹಿಂದಿನ ಸಾಮಾಜಿಕ ಬೇಜವಾಬ್ದಾರಿಯನ್ನು ಎತ್ತಿ ತೋರಿಸಿದರು.

ಕಳೆದ ಶುಕ್ರವಾರ ಬೆಳಿಗ್ಗೆ 3 ಗಂಟೆ ಸುಮಾರಿಗೆ ವಿ ಕಾವೇರಿ ಟ್ರಾವೆಲ್ಸ್ ಬಸ್ ಅಪಘಾತಕ್ಕೀಡಾಯಿತು. ಪಲ್ಸರ್ ಬೈಕ್ ಅನ್ನು ಎಳೆದುಕೊಂಡು ಹೋದ ನಂತರ ಬೆಂಕಿ ಕಾಣಿಸಿಕೊಂಡು ಬಸ್‌ನಲ್ಲಿದ್ದ 19 ಜನರು ಜೀವಂತವಾಗಿ ಸುಟ್ಟುಹೋದರು ಎಂದು ತಿಳಿದುಬಂದಿದೆ. ಕರ್ನೂಲು ಜಿಲ್ಲೆಯ ಚಿನ್ನಟೇಕುರು ಮತ್ತು ಚೆಟ್ಲಮಲ್ಲಪುರಂ ನಡುವೆ ಈ ದುರಂತ ಸಂಭವಿಸಿತ್ತು. ಮೃತರಲ್ಲಿ 13 ಮಂದಿ ಯುವಕರು ಮತ್ತು ಮಹಿಳೆಯರು ಸೇರಿದ್ದಾರೆ. ಡಿಎನ್‌ಎ ಪರೀಕ್ಷೆಗಳನ್ನು ನಡೆಸಿದ ನಂತರ ಮೃತದೇಹಗಳನ್ನು ಅವರ ಕುಟುಂಬಗಳಿಗೆ ಹಸ್ತಾಂತರಿಸಲಾಗುತ್ತಿದೆ.

## ಯತೀಂದ್ರ ಮಾತು ಅಹಿಂದ ನಾಯಕತ್ವದ ಬಗ್ಗೆ, ಸಿಎಂ–ಡಿಸಿಎಂ...

(1ನೇ ಪುಟದಿಂದ)

ದಲಿತರ ಹಣ ಗ್ಯಾರಂಟಿಗೆ ಬಳಕೆ

ಸಿದ್ದರಾಮಯ್ಯ ಅವರ ರಾಜಕೀಯ ಜೀವನ ಅಂತಿಮ ಘಟ್ಟದಲ್ಲಿದೆ. ಹೇಗಾದರೂ ಮಾಡಿ ಇನ್ನರ್ಧ ಅವಧಿಯನ್ನು ಸಿಎಂ ಆಗಿಯೇ ಮುಗಿಸಬೇಕು ಎಂದುಕೊಂಡಿರುವ ಸಿಎಂ ಸಿದ್ದರಾಮಯ್ಯ ಅವರು ಈಗ ಅಹಿಂದ ಅಸ್ತ್ರ ಪ್ರಯೋಗಿಸುತ್ತಿದ್ದಾರೆ. ಅಧಿಕಾರಕ್ಕಾಗಿ ಅಹಿಂದ ಬಳಸಿಕೊಳ್ಳುವ ಸಿದ್ದರಾಮಯ್ಯ ಅವರು ಅಲ್ಪಸಂಖ್ಯಾತರು ಬಿಟ್ಟರೆ ಹಿಂದುಳಿದ ವರ್ಗ, ದಲಿತರ ಕಡೆ ಕಣ್ಣೆತ್ತಿಯೂ ನೋಡುತ್ತಿಲ್ಲ. ದಲಿತರ ಅಭಿವೃದ್ಧಿಗೆ ಮೀಸಲಾಗಿದ್ದ ನಿಧಿಯನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿರುವುದು, ದಲಿತ ಕಲ್ಯಾಣ ನಿಗಮ ಮಂಡಳಿಗಳಲ್ಲಿ ದೋಚಿರುವುದೇ ಸಿದ್ದರಾಮಯ್ಯ ಸರ್ಕಾರದ ಸಾಧನೆಯಾಗಿದೆ ಎಂದು ಬಿಜೆಪಿ ಕರ್ನಾಟಕ ಟ್ವೀಟ್ ಮಾಡಿದೆ.

# ಅಳಿಯನ ಜೊತೆ ಅಕ್ರಮ ಸಂಬಂಧ ಆರೋಪ: ಬೆತ್ತಲೆಗೊಳಿಸಿ, ಮಹಿಳೆ ತಲೆ ಬೋಳಿಸಿ ದೌರ್ಜನ್ಯ

ಯಾದಗಿರಿ: ಅಳಿಯನೊಂದಿಗೆ ಅನೈತಿಕ ಸಂಬಂಧ ಹೊಂದಿದ್ದಾಳೆ ಎಂಬ ಆರೋಪದ ಮೇಲೆ ಮಹಿಳೆಯೊಬ್ಬರನ್ನು ಆಕೆಯ ಕುಟುಂಬಸ್ಥರೇ ನಗ್ನಗೊಳಿಸಿ, ತಲೆ ಬೋಳಿಸಿ, ಸುಣ್ಣ, ಖಾರದ ಪುಡಿ ಎರಚಿ ಚಿತ್ರಹಿಂಸೆ ನೀಡಿರುವ ಅಮಾನವೀಯ ಘಟನೆ ಯಾದಗಿರಿಯ ಶಹಾಪುರ ತಾಲೂಕಿನ ಚಾಮನಾಳ ತಾಂಡಾದಲ್ಲಿ ನಡೆದಿದೆ. ಅಕ್ಟೋಬರ್ 16 ರಂದು ಈ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಕುಟುಂಬಸ್ಥರಿಂದ ದೌರ್ಜನ್ಯಕ್ಕೊಳಗಾದ ಮಹಿಳೆ, ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು. ಕೆಲವೊಮ್ಮೆ ಕಲಬುರಗಿಯಲ್ಲಿರುವ ತನ್ನ ಚಿಕ್ಕಮ್ಮನ ಮನೆಗೆ ಆಗಾಗ ಭೇಟಿ ನೀಡುತ್ತಿದ್ದರು. ಈ ವೇಳೆ ಆಕೆಯ ಅಳಿಯನೇ ಆಕೆಯನ್ನು ವಾಹನದಲ್ಲಿ ಕ–ರೆದುಕೊಂಡು ಹೋಗಿ, ವಾಪಸ್ ಕರೆತರುತ್ತಿದ್ದ. ಹೀಗೆ ಹಲವಾರು ಬಾರಿ ಪಿಕಪ್ ಡ್ರಾಪ್ ಕೊಡಲಾಗುತ್ತಿತ್ತು. ಇದನ್ನೇ ತಪ್ಪಾಗಿ ಅರ್ಥೈಸಿದ ಕುಟುಂಬಸ್ಥರು, ಅಳಿಯನೊಂದಿಗೆ ಆಕೆಗೆ ಅನೈತಿಕ ಸಂಬಂಧವಿದೆ ಎಂದು ತಮಗೆ ತಾವೇ ಊಹಿಸಿಕೊಂಡಿದ್ದರು. ಆ ನಂತರ ಆಕೆಗೆ ಹಿಂಸೆ ಕೊಟ್ಟಿದ್ದಾರೆ.

ಸುಣ್ಣ, ಖಾರದಪುಡಿ ಎರಚಿ ದೌರ್ಜನ್ಯ

ಸಂತ್ರಸ್ತೆಯ ಕುಟುಂಬದ 11 ಮಂದಿ ಸೇರಿ ಮೊದಲು ಆಕೆಯನ್ನು ಮನಬಂದಂತೆ ಥಳಿಸಿದ್ದಾರೆ. ಆ ನಂತರ ಕೇವಲ ಹಲ್ಲೆ ಮಾಡದೆ, ಆಕೆಯನ್ನು ನಗ್ನಗೊಳಿಸಿ, ತಲೆ ಬೋಳಿಸಿ, ಮುಖಕ್ಕೆ ಸುಣ್ಣ ಬಳಿದು, ಮೈಮೇಲೆ ಖಾರದ ಪುಡಿ ಎರಚಿ ವಿಕೃತಿ ಮೆರೆದಿದ್ದಾರೆ. ಗಂಭೀರವಾಗಿ ಗಾಯಗೊಂಡ ಮಹಿಳೆಯನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ.

ದೌರ್ಜನ್ಯ ಖಂಡಿಸಿ, ಅಕ್ಟೋಬರ್ 17 ರಂದು ಕೆಂಭಾವಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ದೂರಿನ ಅನ್ವಯ 11 ಜನರ ವಿರುದ್ಧ ಪ್ರಕರಣ ದಾಖಲಾಗಿದೆ. ಸದ್ಯ ಪೊಲೀಸರು, ಇಬ್ಬರು ಆರೋಪಿಗಳಾದ ಕಸ್ತೂರಿಬಾಯಿ ಮತ್ತು ಡಾಕಪ್ಪ ಎಂಬುವವರನ್ನು ಬಂಧಿಸಿದ್ದಾರೆ. ಉಳಿದ ಆರೋಪಿಗಳಾದ ವಿಜಯಕುಮಾರ್, ತಿಪ್ಪಣ್ಣ, ರಮೇಶ,ಅನುಸೂಯಾ, ತಿಪ್ಪಿಬಾಯಿ, ರೂಪ್ಲಿಬಾಯಿ, ಚಾವಳಿಬಾಯಿ, ದೇವಿಬಾಯಿ ಮತ್ತು ತಿಪ್ಪಣ್ಣ ನಾಯ್ಕ್ ತಲೆಮರೆಸಿಕೊಂಡಿದ್ದಾರೆ. ಅವರಿಗಾಗಿ ಪೊಲೀಸರು ಬಲೆ ಬೀಸಿದ್ದಾರೆ.

ಕೊಲೆ ಮಾಡಿ ಜಾನ್ಸನ್ ಪರಾರಿಯಾಗಿದ್ದಾನೆ," ಎಂದು ಪಾಕಿಯನಾಥನ್ ಅಣ್ಣ ಮದುಲೈಸ್ವಾಮಿ ರಾಮಾಪುರ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿಆರೋಪಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿ ಪತ್ತೆಗೆ ಜಾಲ ಬೀಸಿದ್ದಾರೆ. ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಸಂಧ್ಯಾಯನಪಾಳ್ಯದಲ್ಲಿಕೊಲೆಯಾದ ಸ್ಥಳಕ್ಕೆ ಎಸ್ಪಿ ಡಾ.ಬಿ.ಟಿ.ಕವಿತಾ ಭೇಟಿ ನೀಡಿ ಪರಿಶೀಲಿಸಿದರು.

# ನಟ ದರ್ಶನ್‌ಗೆ ಮರಣ ದಂಡನೆ ಶಿಕ್ಷೆ ಕೊಡಿ: ನಟನ ಪರ ವಕೀಲರಿಂದ ಕೋರ್ಟ್‌ನಲ್ಲಿ ಆಕ್ರೋಶ!

ಬೆಂಗಳೂರು: "ಸುಪ್ರೀಂಕೋರ್ಟ್ ಹೆಸರು ಬಳಸಿ ಹೆದರಿಸಲು ಬರಬೇಡಿ. ನಾಳೆಯೇ ವಿಚಾರಣೆ ನಿಗದಿಪಡಿಸಿ ನಾಡಿದ್ದೇ ಮರಣದಂಡನೆ ಶಿಕ್ಷೆ ಕೊಟ್ಟು ಬಿಡಿ. ಇದೆಲ್ಲಾ ನಿಮ್ಮಿಂದ ಮಾಡಲು ಸಾಧ್ಯವೇ?," ನಟ ದರ್ಶನ್ ಪರ ವಕೀಲ ಸುನೀಲ್‌ಕುಮಾರ್, ಪ್ರಾಸಿಕ್ಯೂಶನ್ (ಪೊಲೀಸರು) ವಿರುದ್ಧ ನ್ಯಾಯಾಲಯದ ವಿಚಾರಣೆ ವೇಳೆ ಆಕ್ರೋಶ ವ್ಯಕ್ತಪಡಿಸಿದ ಬಗೆ ಇದು.

ಉದ್ದೇಶಪೂರ್ವಕವಾಗಿ ಪ್ರಕರಣದ ವಿಚಾರಣೆ (ಟ್ರಯಲ್) ವಿಳಂಬ ಮಾಡಲು ಪ್ರಯತ್ನಿಸಲಾಗುತ್ತಿದೆ ಎಂಬ ಪ್ರಾಸಿಕ್ಯೂಶನ್ ಆರೋಪವನ್ನು ತಳ್ಳಿ ಹಾಕಿದ ವಕೀಲ ಸುನೀಲ್‌ಕುಮಾರ್, ವಿಚಾರಣೆಗೆ ನಾವು ಸಿದ್ಧರಿದ್ದೇವೆ ಎಂದರು.

"ಸುಪ್ರೀಂಕೋರ್ಟ್ ಪಾರದರ್ಶಕ ವಿಚಾರಣೆ ನಡೆಸುವಂತೆ ಹೇಳಿದೆ. ಬೇಕಾದರೆ ನಾಳೆಯೇ ಆರೋಪ ನಿಗದಿಪಡಿಸಿ, ನಾಡಿದ್ದೇ ಗಲ್ಲುಶಿಕ್ಷೆ ಬೇಕಾದರೂ ಕೊಡಿ. ಅದಕ್ಕೆ ನಾವು ಸಿದ್ಧರಿದ್ದೇವೆ. ಆದರೆ, ಇದೆಲ್ಲಾ ಸಾಧ್ಯವೇ? ಬೇಗ ವಿಚಾರಣೆ ನಡೆಸಬೇಕು ಹಾಗೂ ದೋಷಾರೋಪಣೆ ಯಿಂದ ಕೈಬಿಡುವಂತೆ ಅರ್ಜಿ ಸಲ್ಲಿಸುವುದು ಆರೋಪಿಗಳ ಹಕ್ಕು. ಇದನ್ನು ಅಲ್ಲಗಳೆಯುವಂತಿಲ್ಲ," ಎಂದು ಆವೇಶಭರಿತರಾಗಿಯೇ ವಾದ ಮಂಡಿಸಿದರು.

## ಸಿದ್ದರಾಮಯ್ಯ ಪುನಾರಚನೆ ಮಾಡದಿದ್ದದ್ರೆ ...

(1ನೇ ಪುಟದಿಂದ)

ಇನ್ನು ಈಗಾಗಲೇ ಕೆಲ ಹಿರಿಯರಿಂದ ತ್ಯಾಗದ ಮಾತು ಕೇಳಿಬರುತ್ತಿದೆ. ಬದಲಾಗುವ ಪರಿಸ್ಥಿತಿ ಎದುರಿಸಲು ಮಾನಸಿಕವಾಗಿ ಕೆಲ ಹಿರಿಯರು ತಯಾರಾಗುತ್ತಿದ್ದಾರೆ. ಪುನಾರಚನೆಯಾದರೆ, 12ಕ್ಕೂ ಹೆಚ್ಚು ಸೀನಿಯರ್‌ಗಳಿಗೆ ಗೇಟ್‌ಪಾಸ್ ಕೊಡುವ ಸಾಧ್ಯತೆಯಿದೆ. ಇದಕ್ಕೆ ಪೂರಕವಾಗಿ ಹಿರಿಯ ಸಚಿವ ಕೃಷ್ಣಬೈರೇಗೌಡ ಕೂಡಾ ಪುನಾರಚನೆ ಖಚಿತ ಅಂದಿದ್ದಾರೆ. ಸರ್ಕಾರ ರಚನೆ ವೇಳೆಯೇ ಎರಡೂವರೆ ವರ್ಷದ ಬಳಿಕ ಹೊರಗಿರುವ ಶಾಸಕರಿಗೆ ಅವಕಾಶ ಮಾಡಿಕೊಡುವ ಬಗ್ಗೆ ಹೈಕಮಾಂಡ್ ತಿಳಿಸಿತ್ತು ಅಂದಿದ್ದಾರೆ. ಹೈಕಮಾಂಡ್ ಹೇಳಿದರೆ ತ್ಯಾಗಕ್ಕೂ ಸಿದ್ಧ ಅಂದಿದ್ದಾರೆ.

# ಕಲ್ಲಡ್ಕ ಪ್ರಭಾಕರ್ ಭಟ್ ಆಗ್ಲಿ, ಅವರಪ್ಪ ಆಗ್ಲಿ ಕಾನೂನು ಒಂದೇ: ಪ್ರಿಯಾಂಕ್ ಖರ್ಗೆ

ಬೆಂಗಳೂರು: ಕಲ್ಲಡ್ಕ ಪ್ರಭಾಕರ್ ಭಟ್ ಆಗಲಿ, ಅವರ ಅಪ್ಪ ಆಗಲಿ ಕಾನೂನು ಒಂದೇ ಎಂದು ಸಚಿವ ಪ್ರಿಯಾಂಕ್ ಖರ್ಗೆ ಕಿಡಿಕಾರಿದ್ದಾರೆ.

ಪಥ ಸಂಚಲನ ಮಾಡೇ ಮಾಡುತ್ತೇವೆ ಎಂಬ ಕಲ್ಲಡ್ಕ ಪ್ರಭಾಕರ್ ಭಟ್ ಹೇಳಿಕೆ ವಿಚಾರವಾಗಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕಲ್ಲಡ್ಕ ಪ್ರಭಾಕರ್ ಭಟ್ ಯಾರು? ಕೋರ್ಟ್‌ಗಿಂತ ಅವರು ದೊಡ್ಡವರಾ? ಮಾಡಲಿ ನೋಡೋಣ. ಕೋರ್ಟ್ ಅನುಮತಿ ಸಿಗದೇ ಮಾಡುತ್ತಾರಾ? ಅನುಮತಿ ಇಲ್ಲದೇ ಮಾಡಿದರೆ ಸರ್ಕಾರ ಕತ್ತೆ ಕಾಯುತ್ತಿರುತ್ತಾ? ಅನುಮತಿ ತಗೆದುಕೊಳ್ಳಲೇ ಬೇಕು ಎಂದು ವಾಗ್ದಾಳಿ ನಡೆಸಿದರು.

ಬಹಿರಂಗ ಚರ್ಚೆಗೆ ಬನ್ನಿ ಎಂದರೂ ಚರ್ಚೆಗೆ ಬರಲ್ಲ. ಏನಾದ್ರೂ ಕಂಟೆಂಟ್ ಇದ್ರೆ ಬರುತ್ತಿದ್ದರು. ಬರೀ ವೈಯಕ್ತಿಕವಾಗಿ ಮಾತನಾಡುತ್ತಾರೆ. ಆರ್‌ಎಸ್‌ಎಸ್ ರಿಜಿಸ್ಟರ್ ಆಗಿದ್ಯಾ ಎಂದು ಕೇಳಿದ್ರೆ ತಪ್ಪಾ? ದಾಖಲೆ ತಂದು ಮುಖದ ಮೇಲೆ ಬಿಸಾಕಲಿ. ಇವರಿಗೆ ಎಲ್ಲಿಂದ ದೇಣಿಗೆ ಸಿಗುತ್ತಿದೆ? ದೇವಸ್ಥಾನದ ಹುಂಡಿ ಲಾಕ್ ಆಗಿರುತ್ತೆ. ಅದನ್ನ ತೆಗೆಯಬೇಕಾದರೆ ತಹಶೀಲ್ದಾರ್ ಬರಬೇಕು, ಎಲ್ಲವನ್ನೂ ಪಾರದರ್ಶಕವಾಗಿ ತೆಗೆ–ಯುತ್ತಾರೆ. ಆದರೆ ಆರ್‌ಎಸ್‌ಎಸ್‌ಗೆ ಎಲ್ಲಿಂದ ದೇಣಿಗೆ ಬರುತ್ತಿದೆ. ದೇಣಿಗೆ ಮೂಲ ಗೊತ್ತಾಗಬೇಕಲ್ವಾ? ರಾಜ್ಯ, ದೇಶ, ವಿದೇಶದಿಂದ ಬರುತ್ತಿದ್ಯಾ? ಇದರ ಮೂಲ ಗೊತ್ತಾಗಬೇಕಲ್ವಾ? ದೇಶದ ದೊಡ್ಡ ಎನ್‌ಜಿಓ ಅಂತ ಮೋದಿ ಹೇಳ್ತಾರಲ್ವಾ? ಅದರ ಲೆಕ್ಕವನ್ನು ಕೊಡಲಿ ಈಗ. ಸರ್ದಾರ್ ವಲ್ಲಬಾಯ್ ಪಟೇಲ್‌ರಿಂದ ಹಿಡಿದು ಇಂದಿರಾಗಾಂಧಿವರೆಗೆ ನಾವು ದೊಡ್ಡ ಮನಸ್ಸು ಮಾಡಿಕೊಂಡು ಬಂದಿದ್ದೇವೆ, ಅದೇ ತಪ್ಪಾಗಿದೆ ಎಂದು ಹರಿಹಾಯ್ದರು.

# ಮದುವೆಯಾಗಿ ಏಳೇ ತಿಂಗಳಿಗೆ ಕನ್ನಡ ಕಲ್ತೆ; ಸಂಸದ ತೇಜಸ್ವಿ ಸೂರ್ಯ ಪತ್ನಿ ಭಾಷಾ ಪ್ರೇಮ



ಬೆಂಗಳೂರು: ನಗರದಲ್ಲಿ ಪರ ರಾಜ್ಯದವರು ಕನ್ನಡದಲ್ಲಿ ಮಾತನಾಡೋಲ್ಲ ಎಂಬ ವಿವಾದಗಳು ಜರುಗುತ್ತಲೇ ಇರುತ್ತದೆ. ಇನ್ನು ಉದ್ಯೋಗಕ್ಕಾಗಿ ವಲಸೆ ಬಂದ ಉತ್ತರ ಭಾರತದ ಉದ್ಯೋಗಿಗಳು ಕನ್ನಡ್ ಬರಲ್ಲ ಎಂದು ಭಾರಿ ಮಾತಿನ ಮಾರಾಮಾರಿಗೆ ಕಾರಣವಾಗುತ್ತದೆ. ಉತ್ತರ ಭಾರತದವರು ಐದಾರು ವರ್ಷದಿಂದ ವ್ಯಾಪಾರ ಮಾಡುತ್ತ ಬೆಂಗಳೂರಿನಲ್ಲಿದ್ದರು. ಹಿಂದಿಯಲ್ಲೇ ವ್ಯವಹರಿಸುತ್ತಾರೆ. ಸದ್ಯ ಈ ಎಲ್ಲ ರೀತಿಯ ಜನರು, ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರ ಪತ್ನಿಯ ನಡೆಯನ್ನೂ ಅನುಸರಿಸಲೇ ಬೇಕು. ಹೇಗೆ ಅಂತೀರ ಈ ಲೇಖನದಲ್ಲಿದೆ ಈ ಬಗ್ಗೆ ಮಾಹಿತಿ.

ಸಂಸದ ತೇಜಸ್ವಿ ಸೂರ್ಯ ಅವರನ್ನು ಶಿವಶ್ರೀ ಅವರು 2025ರ ಮಾರ್ಚ್ ತಿಂಗಳ ಅಂತ್ಯದಲ್ಲಿ ಮದುವೆ ಮಾಡಿಕೊಂಡಿದ್ದರು. ಶಿವಶ್ರೀ ಅವರು ಮೂಲತಃ ತಮಿಳುನಾಡಿನ ಚೆನ್ನೈನವರು. ಅವರು ಬಾಲ್ಯ ಯೌವ್ವನ ಸೇರಿದಂತೆ ಬಹುತೇಕ ಸಮಯವನ್ನು ಚೆನ್ನೈನಲ್ಲಿ ಕಳೆದಿದ್ದಾರೆ. ಜೊತೆಗೆ ಅವರ ಮಾತೃಭಾಷೆ ತಮಿಳು. ಆದರೆ, ತೇಜಸ್ವಿ ಸೂರ್ಯರನ್ನು ಮದುವೆಯಾಗಿ ಬೆಂಗಳೂರಿಗೆ ಬಂದ ನಂತರ ಅವರ ಮನೆಯ ಕುಟುಂಬಸ್ಥರು ಮತ್ತು ಅವರ ಪತಿ ತೇಜಸ್ವಿ ಸೂರ್ಯ ಅವರ ಮನೆಯಲ್ಲಿ ಹೆಚ್ಚಾಗಿ ಕನ್ನಡ ಮಾತನಾಡುವ ಹಿನ್ನೆಲೆ, ಮದುವೆಯಾದ ಏಳೇ ತಿಂಗಳಿಗೆ ಅವರು ಕನ್ನಡ ಭಾಷೆ ಕಲಿತಿದ್ದಾರೆ ಎಂಬುದನ್ನು ಸ್ಪಷ್ಟ ಪಡಿಸಿದ್ದಾರೆ. ಜೊತೆಗೆ ಅವರು ಖಾಸಗಿ ಯೂಟ್ಯೂಬ್ ಚಾನೆಲ್‌ವೊಂದಕ್ಕೆ ಕೊಟ್ಟ ವಿಡಿಯೋದಲ್ಲಿ ಅವರು ತಪ್ಪಿಲ್ಲದೆ ಕನ್ನಡ ಮಾತನಾಡಿರುವುದು ಕಂಡುಬಂದಿದೆ.

ತಮಿಳುನಾಡಿನವರಾದ ಶಿವಶ್ರೀ

ಶಿವಶ್ರೀ ಅವರು ಗಾಯಕಿ, ನೃತ್ಯಗಾರ್ತಿ. ಇತ್ತೀಚೆಗೆ ಅವರು ಕನ್ನಡ ಪಾಡ್ಕಾಸ್ಟ್ ಒಂದರಲ್ಲಿ ಅವರು ಮಾತನಾಡಿರುವ ವಿಡಿಯೋ ವೈರಲ್ ಆಗುತ್ತಿದೆ. ಈ ವಿಡಿಯೋದಲ್ಲಿ ಶಿವಶ್ರೀ ಅವರ ಕನ್ನಡ ಕೇಳಿ ಸಂದರ್ಶಕಿ ಬೆರಗಾಗಿದ್ದಾರೆ. ನೀವು ಇಷ್ಟು ಬೇಗ ಕನ್ನಡ ಮಾತನಾಡಲು ಕಲಿತಿದ್ದು ಹೇಗೆ? ಮುಂಚೆಯೇ ನಿಮಗೆ ಕನ್ನಡ ಬರುತ್ತಿತ್ತಾ ಅಥವಾ ಮದುವೆಯಾದ ಮೇಲೆ ಕಲಿತಿದ್ದಾ ಎಂದು ಪ್ರಶ್ನೆ ಮಾಡಿದ್ದಾರೆ. ಚೆನ್ನೈನಲ್ಲೇ ಹುಟ್ಟಿ ಚೆನ್ನೈನಲ್ಲೇ ಬೆಳೆದಿದ್ದೀರಾ ಇಷ್ಟು ಒಳ್ಳೆಯ ಕನ್ನಡ ಕಲಿಯಲು ಹೇಗೆ ಸಾಧ್ಯ ಎಂದು ಕೇಳಿದರು.

ಏಳು ತಿಂಗಳಲ್ಲಿ ಕನ್ನಡ ಕಲಿತೆ

ಸಂದರ್ಶಕಿ ಪ್ರಶ್ನೆಗೆ ಶಿವಶ್ರೀ ಅವರು ಉತ್ತರಿಸಿದ್ದು ಹೀಗೆ, ಅಯ್ಯೋ ನಾನು ಹೇಗೋ ಮ್ಯಾನೇಜ್ ಮಾಡ್ತಾ ಇದ್ದೀನಿ. ಬೆಂಗಳೂರಿಗೆ ಬಂದು ಕನ್ನಡ ಕಲಿಯುತ್ತಿದ್ದೇನೆ. ಮದುವೆಯಾಗಿ ಏಳು ತಿಂಗಳಾಗಿದೆ ಅಷ್ಟರಲ್ಲಿ ಕಲಿತಿದ್ದೇನೆ. ಮನೆಯಲ್ಲಿ ಮಾತನಾಡಿ ಮಾತನಾಡಿ. ಕುಟುಂಬದವರು ಕನ್ನಡ ಮಾತನಾಡುವುದರಿಂದ ಅದನ್ನು ಕೇಳಿ ಕಲಿತೆ. ನಾನು ಯೂಟ್ಯೂಬ್‌ನಲ್ಲಿ ಕನ್ನಡ ಕ್ಲಾಸ್ ನೋಡ್ತಿದ್ದೆ. ಅದ್ರಲ್ಲಿ ಒಬ್ಬರು ಕನ್ನಡ ಕಲಿಸುವುದು ತುಂಬಾ ಚೆನ್ನಾಗಿತ್ತು. ತಮಿಳಿನಿಂದ ಕನ್ನಡ ಕಲಿಯುವುದು ಹೇಳಿಕೊಟ್ಟರು ಎಂದರು.

ನಗರವಾಣಿ ದಾವಣಗೆರೆ
ಅಕ್ಟೋಬರ್ 27, 2025
ಸೋಮವಾರ,
ಪುಟ–3

ಪತ್ರಿಕೆಗಳಿಗೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ 08192–254186

## ಒಳ ಉಡುಪಲ್ಲಿ ಮೊಬೈಲ್; ಜೈಲು ವೀಕ್ಷಕ ಬಂಧನ

ಬೆಂಗಳೂರು: ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಒಳ ಉಡುಪಿನಲ್ಲಿಟ್ಟುಕೊಂಡು ಮೊಬೈಲ್ ಕಳ್ಳಸಾಗಣೆ ಮಾಡುತ್ತಿದ್ದ ಜೈಲಿನ ವೀಕ್ಷಕನನ್ನು ಪೊಲೀಸರು ಬಂಧನಕ್ಕೊಳಪಡಿಸಿದ್ದಾರೆ.

ಬಂಧಿತ ಜೈಲು ಸಿಬ್ಬಂದಿಯನ್ನು ಅಮರ್ ಪ್ರಾಂಜೆ (29) ಎಂದು ಗುರ್ತಿಸಲಾಗಿದೆ. ಅಮರ್ ಅಕ್ಟೋಬರ್ 23ರಂದು ಕರ್ತವ್ಯಕ್ಕೆ ಆಗಮಿಸಿದ್ದಾನೆ. ಈ ವೇಳೆ ಪ್ರವೇಶ ದ್ವಾರದಲ್ಲಿದ್ದ ಕೆಎಸ್ಐಎಸ್ಎಫ್ ಸಿಬ್ಬಂದಿ ತಪಾಸಣೆಗೆ ಒಳಪಡಿಸಲು ಮುಂದಾಗಿದ್ದಾರೆ. ಇದಕ್ಕೆ ವಿರೋಧ ವ್ಯಕ್ತಪಡಿಸಿದ ಆತ ವಾಪಸ್ ಹೋಗಲು ಮುಂದಾಗಿದ್ದಾನೆ. ಇದರಿಂದ ಅನುಮಾನಗೊಂಡ ಸಿಬ್ಬಂದಿ ಅವನನ್ನು ಹಿಡಿದು ತಪಾಸಣೆ ನಡೆಸಿದಾಗ ಒಳುಡುಪಿನಲ್ಲಿ ಒಂದು ಸ್ಮಾರ್ಟ್‌ಫೋನ್, ಇಯರ್ ಫೋನ್ ಪತ್ತೆಯಾಗಿದೆ. ತಕ್ಷಣ ಜೈಲಿನ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಅಮರ್ ಪ್ರಾಂಜೆಯನ್ನ ಬಂಧಿಸಿದ್ದಾರೆ. ಈ ಸಂಬಂಧ ಜೈಲು ಅಧೀಕ್ಷಕ ಹೆಚ್.ಎ ಪರಮೇಶ್ ನೀಡಿದ ದೂರಿನ ಮೇರೆಗೆ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಕಥೆ-ಕವನ, ಚುಟುಕು, ಮಕ್ಕಳು ಬಿಡಿಸಿದ ಚಿತ್ರಗಳನ್ನು ಪ್ರಕಟಿಸುವ ವಿಭಾಗ**
**9740137083**

### ದಿನಕ್ಕೊಂದು ಚುಟುಕು

ಕೊಟ್ಟಿದ್ದನ್ನು ಕೆದಕುತಿರೆ
ಇಕ್ಕಿದ್ದನ್ನು ಹೆಸರಿಸುತಿರೆ
ಪಡೆದದ್ದನ್ನು ಮರೆಯುತಿರೆ
ಮೆಚ್ಚುವನಾರು ನಿಮ್ಮೀ ಹಾವಭಾವ..?

– ಡಾ. ಮಮು

### ದಿನಕ್ಕೊಂದು ನುಡಿ ಮುತ್ತು

ಸಾಧನೆಗೆ ಸಲ್ಲುವ
ಸನ್ಮಾನಗಳು
ಖುಷಿಗಿಂತಲೂ
ಹೆಚ್ಚಾಗಿ
ಜವಾಬ್ದಾರಿಗಳನ್ನು
ಹೆಚ್ಚಿಸುತ್ತದೆ!

– ಮಂಜುಳಾ ಪ್ರಸಾದ್, ದಾವಣಗೆರೆ

# ಮಳೆಯಾಶ್ರಿತ ಕೂರಿಗೆ ಭತ್ತ ಉತ್ತಮ ಇಳುವರಿ ನಿರೀಕ್ಷೆ: ಬೇಸಾಯ ತಜ್ಞ ಮಲ್ಲಿಕಾರ್ಜುನ



ದಾ ನಗರವಾಣಿ ಸುದ್ದಿ

ಜಗಳೂರು : ತಾಲ್ಲೂಕಿನ ಗುತ್ತಿದುರ್ಗ ಗ್ರಾಮದಲ್ಲಿ ನೇರ ಕೂರಿಗೆ ಭತ್ತ ಬಿತ್ತನೆಯ ಮುಂಚೂಣಿ ಪ್ರಾತ್ಯಕ್ಷಿಕೆಯ ತಾಕುಗಳಿಗೆ ವಿಜ್ಞಾನಿಗಳು ಮತ್ತು ಕೃಷಿಕರು ಭೇಟಿ ನೀಡಿದರು.

ಪ್ರಸ್ತುತ ವರ್ಷ 2025–26 ನೇ ಸಾಲಿನಲ್ಲಿ ನೇರ ಕೂರಿಗೆ ಭತ್ತ ಬಿತ್ತನೆಯ ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಜಗಳೂರು ತಾಲ್ಲೂಕಿನ ಗುತ್ತಿದುರ್ಗ, ದೇವಿಕೆರೆ, ಕೊರಟಗೆರೆ, ಚದ್ರಗೊಳ್ಳ, ಬಿಳಿಚೋಡು ಗ್ರಾಮಗಳಲ್ಲಿ ಆಯ್ದ ರೈತರಿಗೆ ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಮಾಡಿಸಲಾಗಿದೆ. ಭತ್ತದ ಬೆಳೆಯು ಕಾಳು ಕಟ್ಟುವ ಹಂತದಲ್ಲಿದ್ದು, ಬೆಳೆಯು ಉತ್ತಮವಾಗಿದ್ದು ಒಳ್ಳೆಯ ಇಳುವರಿಯ ನಿರೀಕ್ಷೆ ಇದೆ ಎಂದು ಬೇಸಾಯ ತಜ್ಞರಾದ ಮಲ್ಲಿಕಾರ್ಜುನ ಬಿ. ಓ. ರವರು ತಿಳಿಸಿದರು.

ಮಳೆಯಾಶ್ರಿತ ಭತ್ತಕ್ಕೆ ಭೂಮಿ ಒಣಗಿದಾಗ ನೀರನ್ನು ಒದಗಿಸಿದ್ದೇವೆ. ಸ್ಪ್ರಿಂಕ್ಲರ್ ಮುಖಾಂತರ ಭತ್ತಕ್ಕೆ ಮೂರು ಬಾರಿ ನೀರನ್ನು ಒದಗಿಸಿದ್ದೇನೆ ಎನ್ನುತ್ತಾರೆ ಪ್ರಗತಿಪರ ಕೃಷಿಕ ಬಸವನಗೌಡರು.

ಕಾರ್ಯಕ್ರಮದಲ್ಲಿ ಸಾವಯವ ಕೃಷಿಕರಾದ ಬಿಳಿಚೋಡು ಅರುಣ್ ಕುಮಾರ್ ರವರು ಮಾತನಾಡುತ್ತಾ ಜಗಳೂರು ತಾಲ್ಲೂಕಿನಲ್ಲಿ ಕೂರಿಗೆ ಭತ್ತ ಬೆಳೆಸುವ ಸಾಹಸವನ್ನು ನಮ್ಮ ಕೃಷಿ ವಿಜ್ಞಾನಿಗಳಾದ ಮಲ್ಲಿಕಾರ್ಜುನ್ ಬಿ. ಓ. ರವರು ಕಳೆದ ಎರಡು ವರ್ಷಗಳಿಂದ ಪ್ರಾತ್ಯಕ್ಷಿಕೆ ಮಾಡಿಸುತ್ತಿದ್ದಾರೆ. ಈ ವರ್ಷ ನಾವು ಕೂಡ ಭತ್ತವನ್ನು ಬೆಳೆದಿದ್ದು ಬಹಳ ಉತ್ತಮವಾಗಿದೆ ಹಾಗೂ ವಿಷಮುಕ್ತ ಭತ್ತವನ್ನು ಬೆಳೆಯುತ್ತಿದ್ದೇವೆ ಎಂದು ಸಂತಸ ವ್ಯಕ್ತಪಡಿಸಿದರು.

ಜಗಳೂರು ಪಟ್ಟಣದ ಶ್ರೀಧರ್ ರೆಡ್ಡಿ ರವರು ಮಾತನಾಡುತ್ತಾ ಸೆಪ್ಟೆಂಬರ್ ತಿಂಗಳಲ್ಲಿ ಮಳೆ ಇಲ್ಲದ ಕಾರಣ ಭತ್ತ ಒಣಗಿ ಹೋಗಿತ್ತು, ಅಕ್ಟೋಬರ್ ತಿಂಗಳಲ್ಲಿ ಬಂದ ಮಳೆಯಿಂದ ಮತ್ತೆ ಬೆಳೆ ಚಿಗುರಿದ್ದು, 6–8 ಕ್ವಿಂಟಲ್ ಇಳುವರಿಯನ್ನು ನಿರೀಕ್ಷೆ ಮಾಡಿದ್ದೇನೆ ಎಂದರು.

ಗುತ್ತಿದುರ್ಗ ಗ್ರಾಮದ ಪ್ರತಿಯೊಬ್ಬ ರೈತರು ಕ್ಷೇತ್ರ ಭೇಟಿಯನ್ನು ಮಾಡಿ ಭತ್ತದ ಬೆಳೆಯನ್ನು ನೋಡಿ ಆಶ್ಚರ್ಯಪಟ್ಟು ಮುಂದಿನ ಬಾರಿ ನಾವು ಕೂಡ ಭತ್ತವನ್ನು ಬೆಳೆಯುತ್ತೇವೆ ಎಂದರು. ಕಾರ್ಯಕ್ರಮದಲ್ಲಿ ಕೃಷಿ ಇಲಾಖೆಯ ಆತ್ಮ ಯೋಜನೆಯ ಅಧಿಕಾರಿಯಾದ ಅನಿಲ್, ಪ್ರಗತಿಪರ ಕೃಷಿಕರಾದ ಅರುಣ್ ಕುಮಾರ್, ಸುರೇಶ್ ಹಾಗೂ ಪ್ರಗತಿಪರ ರೈತರು ಹಾಗೂ ಕೃಷಿ ಸಖಿಗಳಾದ ರಶ್ಮಿ ಮತ್ತು ರೇಣುಕಮ್ಮ ಭಾಗವಹಿಸಿದ್ದರು.



ಹರಿಹರ: ತಾಲ್ಲೂಕಿನ ಸಾರಥಿ ಗ್ರಾಮದಲ್ಲಿ ಲಿಂಗಾಯತ ಪಂಚಮಸಾಲಿ ಸಮಾಜದ ವತಿಯಿಂದ ಕಿತ್ತೂರು ರಾಣಿ ಚನ್ನಮ ಜಯಂತಿ ಅಂಗವಾಗಿ ಭಾನುವಾರ ಗ್ರಾಮದ ವೃತ್ತದಲ್ಲಿ ಅಳವಡಿಸಿರುವ ಕಿತ್ತೂರು ರಾಣಿ ಚನ್ನಮ್ಮ ನಾಮಫಲಕವನ್ನು ಶಾಸಕ ಬಿ.ಪಿ ಹರೀಶ್ ಹಾಗೂ ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಸ್. ರಾಮಪ್ಪ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಚಿದಾನಂದಪ್ಪ , ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಹನಗವಾಡಿ ವೀರೇಶ್ ಹಾಗೂ ಗ್ರಾಮ ಪಂಚಾಯತಿ ಅಧ್ಯಕ್ಷರು ಗ್ರಾಮಸ್ಥರು, ಸಮಾಜದ ಮುಖಂಡರು , ಹಿರಿಯರು ಹಾಗೂ ಇತರರು ಉಪಸ್ಥಿತರಿದ್ದರು.

# ಆರೆಎಸ್ಸೆಸ್ ಸಂಘಟನೆ ಕಾನೂನಿಗಿಂತ ಸಂವಿಧಾನಕ್ಕಿಂತ ದೊಡ್ಡದಲ್ಲ : ಖರ್ಗೆ

ಬೆಂಗಳೂರು: ಸರ್ಕಾರಿ ಶಾಲೆಗಳು, ಕಾಲೇಜುಗಳು ಮತ್ತು ಸರ್ಕಾರಿ ಸ್ವಾಮ್ಯದ ದೇವಾಲಯಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಚಟುವಟಿಕೆಗಳನ್ನು ನಿಷೇಧಿಸಬೇಕೆಂದು ಪುನರುಚ್ಚರಿಸಿದ ಸಚಿವ ಪ್ರಿಯಾಂಕ್ ಖರ್ಗೆ, ಸಂಘಟನೆಯು ಕಾನೂನು ಮತ್ತು ಸಂವಿಧಾನಕ್ಕಿಂತ ದೊಡ್ಡದಲ್ಲ ಎಂದು ಭಾನುವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆರ್‌ಎಸ್‌ಎಸ್ ಕಾನೂನು ಮತ್ತು ಸಂವಿಧಾನಕ್ಕಿಂತ ದೊಡ್ಡದಲ್ಲ. ಈ ಪರಿಸ್ಥಿತಿ ಎಷ್ಟು ಕಾಲ ಮುಂದುವರಿಯುತ್ತದೆ? ದೇಶದ ಪ್ರತಿಯೊಬ್ಬ ನಾಗರಿಕ ಮತ್ತು ಸಂಘಟನೆಯನ್ನು ಅವರ ಕಾರ್ಯಗಳಿಗೆ ಹೊಣೆಗಾರರನ್ನಾಗಿ ಮಾಡಬೇಕು' ಎಂದು ಹೇಳಿದರು.

ಸರ್ಕಾರಿ ಸಂಸ್ಥೆಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿಷೇಧಿಸುವಂತೆ ಸಚಿವರು ಈ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದರು.

ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರನ್ನು ಟೀಕಿಸಿದ ಖರ್ಗೆ, ಬೆಂಗಳೂರಿನಲ್ಲಿ ಐಟಿ ಕ್ಷೇತ್ರದ ಅಭಿವೃದ್ಧಿಗೆ ಅವರ ಕೊಡುಗೆಯನ್ನು ಪ್ರಶ್ನಿಸಿದರು. 'ಐಟಿ ಕ್ಷೇತ್ರದಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ತೇಜಸ್ವಿ ಸೂರ್ಯ ಯಾವುದೇ ಕೊಡುಗೆ ನೀಡಿಲ್ಲ. ಅವರು ಅಥವಾ ಇತರೆ ಬಿಜೆಪಿ ಸಂಸದರು ಬೆಂಗಳೂರಿಗೆ ತಂದಿರುವ ಒಂದು ಯೋಜನೆಯನ್ನು ಹೆಸರಿಸಬಹುದೇ? ಸೆಮಿಕಂಡಕ್ಟರ್ ಕೈಗಾರಿಕೆಗಳು ಬೆಂಗಳೂರಿಗೆ ಬರಲು ಬಯಸಿದರೂ ಅಸ್ಸಾಂ ಮತ್ತು ಗುಜರಾತ್‌ಗೆ ಏಕೆ ಹೋಗುತ್ತಿವೆ? ಗುಜರಾತ್ ಮತ್ತು ಅಸ್ಸಾಂನಲ್ಲಿ ಏನಿದೆ? ಪ್ರತಿಭೆ ಇದೆಯೇ?' ಎಂದು ಕೇಳಿದರು.

ಬೆಂಗಳೂರಿನ ಲಾಲ್ ಬಾಗ್ ನಲ್ಲಿ ಸುರಂಗ ಮಾರ್ಗ ನಿರ್ಮಾಣ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಡಿಕೆ ಶಿವಕುಮಾರ್, ಬಿಜೆಪಿ ಸಂಸದ ತೇಜಸ್ವಿ ವಿರುದ್ಧ ವಾಗ್ದಾಳಿ ನಡೆಸಿದರು. ತೇಜಸ್ವಿ ಸೂರ್ಯ ಒಬ್ಬ ಖಾಲಿ ಟ್ರಂಕ್ ಎಂದು ಕಿಡಿ–ಕಾರಿದರು.

ಕರ್ನಾಟಕ ಸರ್ಕಾರ
**ಗ್ರಾಮ ಪಂಚಾಯತ್ ಕಾರ್ಯಾಲಯ, ಬೆಳವನೂರು**
ಇ–ಮೇಲ್: belavanur.dvg@gmail.com ದೂರವಾಣಿ ಸಂಖ್ಯೆ: 9480863550

ಸಂ: ಗ್ರಾ.ಪಂ:ಕಾ:ಬೆಳವನೂರು:ಅ.ಟೆಂ:ಇ–ಪ್ರೊ/ /2025–26 ದಿನಾಂಕ 23.10.2025
**ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್ ಮೂಲಕ)**

ಈ ವಿಭಾಗ ವ್ಯಾಪ್ತಿಯ ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು 2024–25ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಅನುಮೋದನೆಯಾದ ಕಾಮಗಾರಿಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ದ್ವಿ–ಲಕೋಟೆ ಕೆ.ಡಬ್ಲ್ಯೂ ನಮೂನೆ–1 ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ: 13 ಅಂದಾಜು ಮೊತ್ತ ರೂ 1.26 ಲಕ್ಷಗಳಿಂದ ರೂ. 3.92 ಲಕ್ಷಗಳು ಇರುತ್ತದೆ. ಕಾಮಗಾರಿಯ ಸ್ವರೂಪ, ಸಿಸಿ ಚರಂಡಿ, ಸಿಸಿ ರಸ್ತೆ, ಸ್ಮಶಾನ ಅಭಿವೃದ್ಧಿ, ಪೈಪ್‌ಲೈನ್ ಮತ್ತು ವಾಲ್ ಅಳವಡಿಕೆ ಕಾಮಗಾರಿ. ದಿನಾಂಕ 23.10.2025ರಿಂದ ಟೆಂಡರ್ ಫಾರಂಗಳನ್ನು ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ 03.11.2025ರ ಸಂಜೆ 4 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗೆ ಈ ಕಚೇರಿಯ ದೂರವಾಣಿ ಸಂಖ್ಯೆ: 9480863550 ಅಥವಾ ವೆಬ್‌ಸೈಟ್‌ನಲ್ಲಿ www.kppp.karnataka.gov.in ಪಡೆಯಬಹುದಾಗಿರುತ್ತದೆ.

– ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಬೆಳವನೂರು

## ಬೀದರ್ ಜಿಲ್ಲೆಯಲ್ಲಿ ಭೂಕಂಪನ

ಬೀದರ್: ಗಡಿ ಜಿಲ್ಲೆ ಬೀದರ್‌ನಲ್ಲಿ ಭಾನುವಾರ ಮುಂಜಾನೆ ಭೂಕಂಪನದ ಅನುಭವವಾಗಿದೆ. ಇಂದು ಬೆಳಗಿನ ಜಾವ 3–42 ಗಂಟೆಗೆ ಲಘು ಭೂಕಂಪದ ಅನುಭವದಿಂದ ಜನರು ಕೆಲಕಾಲ ಆತಂಕಕ್ಕೊಳಗಾದರು.

ಚಿಟಗುಪ್ಪಾ ತಾಲೂಕಿನ ಭಾಸ್ಕರ್‌ನಗರ ಹಳ್ಳಿಯಲ್ಲಿ ಭೂಮಿ ಕಂಪಿಸಿರುವುದಾಗಿ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಭೂಕಂಪನ ಕೇಂದ್ರ ತಿಳಿಸಿದೆ. ರಿಕ್ಟರ್ ಮಾಪಕದಲ್ಲಿ 2.9 ಪ್ರಮಾಣದಲ್ಲಿ ಕಂಪನದ ತೀವ್ರತೆ ದಾಖಲಾಗಿದೆ.

ಭಾಸ್ಕರ್ ನಗರ ಸುತ್ತಮುತ್ತಲಿನ 30 ರಿಂದ 40 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಭೂಮಿ ಕಂಪಿಸಿದ ವರದಿಯಾಗಿದೆ. ಇದರಿಂದ ಗ್ರಾಮಸ್ಥರು ಭಯಭೀತಿಗೊಂಡಿದ್ದರು. ಆದ–ರೆ ಲಘು ಭೂಕಂಪನದಿಂದ ಯಾವುದೇ ಹಾನಿ ಆಗಿಲ್ಲ ಎಂದು ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಭೂಕಂಪನ ಕೇಂದ್ರ ಮಾಹಿತಿ ನೀಡಿದೆ.

# ಗುಂಡಿ ಜಟಾಪಟಿ– ಡಿನ್ನರ್ ಮೀಟಿಂಗ್ ಮಾಡಿ ಉದ್ಯಮಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡ ಡಿಕೆಶಿ



ಬೆಂಗಳೂರು: ಬೆಂಗಳೂರಿನ ಗುಂಡಿ ಸಮಸ್ಯೆ, ಕಸದ ಸಮಸ್ಯೆ, ಮೂಲಭೂತ ಸಮಸ್ಯೆಗಳ ವಿರುದ್ಧ ಉದ್ಯಮಿಗಳು ಸಿಡಿದೆದಿದ್ದರು. ಸರ್ಕಾರದ ವಿರುದ್ಧ ಖಾರವಾಗಿ ಎಕ್ಸ್ ಖಾತೆಯಲ್ಲಿ ಟೀಕೆ ಮಾಡಿದ್ದರು. ಕೆಲದಿನ ಸರ್ಕಾರ ವರ್ಸಸ್ ಉದ್ಯಮಿಗಳ ನಡುವೆ ಟ್ವೀಟ್ ವಾರ್, ಟಾಕ್‌ವಾರ್ ನಡೆದಿತ್ತು. ಇದು ರಾಷ್ಟ್ರಮಟ್ಟದಲ್ಲೂ ಚರ್ಚೆ ಆಗಿತ್ತು. ಆದರೆ ಈಗ ಬೆಂಗಳೂರಿನ ಗುಂಡಿ ಸಮಸ್ಯೆ ಬಗ್ಗೆ ಟೀಕಿಸಿದ್ದ ಉದ್ಯಮಿಗಳ ಜೊತೆಯೇ ಉಪಮುಖ್ಯಮಂತ್ರಿ ಡಿಕೆಶಿ ಡಿನ್ನರ್ ಮೀಟಿಂಗ್ ಮಾಡಿದ್ದಾರೆ.

ಬಯೋಕಾನ್ ಮುಖ್ಯಸ್ಥೆ, ಉದ್ಯಮಿ ಕಿರಣ್ ಮಜುಂದಾರ್ ಶಾ ನಿವಾಸದಲ್ಲಿ ಶನಿವಾರ ರಾತ್ರಿ ಡಿಸಿಎಂ ಡಿಕೆ ಶಿವಕುಮಾರ್ ಡಿನ್ನರ್ ಮೀಟಿಂಗ್ ನಡೆಸಿದ್ದಾರೆ. ಕಿರಣ್ ಮಜುಂದರ್ ಶಾ, ಉದ್ಯಮಿ ಮೋಹನ್ ದಾಸ್ ಪೈ ಸೇರಿದಂತೆ ಹಲವು ಉದ್ಯಮಿಗಳು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ ರಾವ್ ಸಹ ಡಿನ್ನರ್ ಮೀಟಿಂಗ್‌ನಲ್ಲಿ ಭಾಗಿಯಾಗಿದ್ದರು. ಡಿನ್ನರ್ ಮೀಟಿಂಗ್ ವೇಳೆ ಗುಂಡಿಗಳ ದುರಸ್ತಿ, ಹೊರ ವರ್ತುಲ ರಸ್ತೆಯ ಅಭಿವೃದ್ಧಿ, ನಗರಾದ್ಯಂತ ಸ್ವಚ್ಛತಾ ಅಭಿಯಾನ, ಓಆರ್‌ಆರ್ ಉದ್ದಕ್ಕೂ ನಡೆಯುತ್ತಿರುವ ಮೆಟ್ರೋ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಡಿಸಿಎಂ ಡಿಕೆಶಿಗೆ ಉದ್ಯಮಿಗಳು ಮನವಿ ಮಾಡಿದ್ದಾರೆ.

ಉದ್ಯಮಿಗಳೊಂದಿನ ಡಿನ್ನರ್ ಮೀಟಿಂಗ್ ಬಗ್ಗೆ ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ ಡಿಸಿಎಂ ಡಿಕೆಶಿ, ಉದ್ಯಮಿಗಳ ಜೊತೆ ಡಿನ್ನರ್ ಮಿಟಿ–ಂಗ್ ಮಾಡಿದ್ದೀನಿ. ಬೆಂಗಳೂರಿನ ಹಲವು ಸಮಸ್ಯೆಗಳಿಗೆ ಸಲಹೆ ನೀಡಿದ್ದಾರೆ. ಉದ್ಯಮಿಗಳ ಸಲಹೆಯನ್ನ ನಾವು ಸ್ವೀಕರಿಸುತ್ತೇವೆ. ಸರ್ಕಾರ ಒಂದು ನಿರ್ಧಾರ ತೆಗೆದುಕೊಳ್ಳುವಾಗ ದೂರದೃಷ್ಟಿ ಇರುತ್ತದೆ. ನಮಗೆ ಸಲಹೆ ಕೊಡಿ ಅದ್ರೆ ನಮ್ಮನ್ನು ಹರ್ಟ್ ಮಾಡುವಂತೆ ಮಾಡಬೇಡಿ ಅಂತಾ ಹೇಳಿದ್ದೇನೆ ಎಂದರು.

ಡಿಕೆಶಿ ನಡಿಗೆ ಕಾರ್ಯಕ್ರಮ ಮೆಚ್ಚಿ ಪೋಸ್ಟ್:

ಇನ್ನು ಶನಿವಾರ ರಾತ್ರಿ ಡಿನ್ನರ್ ಮೀಟಿಂಗ್ ಮೂಲಕ ಉದ್ಯಮಿಗಳನ್ನು ಡಿಕೆ ಶಿವಕುಮಾರ್ ವಿಶ್ವಾಸಕ್ಕೆ ಪಡೆದಿದ್ದಾರೆ. ಇದರ ಬೆನ್ನಲ್ಲೇ ಡಿಸಿಎಂ ಡಿಕೆ ಶಿವಕುಮಾರ್ ಕಾರ್ಯಕ್ರಮಗಳನ್ನ ಉದ್ಯಮಿಗಳು ಶ್ಲಾಘಿಸಿದ್ದಾರೆ. ಡಿಕೆಶಿ ನಾಗರಿಕರೊಂದಿಗೆ ನಡಿಗೆ ಕಾರ್ಯಕ್ರಮವನ್ನ ಉದ್ಯಮಿ ಮೋಹನ್ ದಾಸ್ ಪೈ ಹೊಗಳಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಬೆಂಗಳೂರಿಗಾಗಿ ಅದ್ಭುತ ಕಾರ್ಯಕ್ರಮ ಮಾಡುತ್ತಿದ್ದೀರಿ. ಈ ಕಾರ್ಯಕ್ರಮದ ಮೂಲಕ ಜನರನ್ನ ಭೇಟಿ ಮಾಡಿ ಸಮಸ್ಯೆ ಪರಿಹರಿಸುವ ದೊಡ್ಡ ಕೆಲಸ ಮಾಡುತ್ತಿದ್ದೀರಿ. ಮೂರು ತಿಂಗಳಲ್ಲಿ ಬೆಂಗಳೂರಿನ ಅಭಿವೃದ್ಧಿ ಬಗ್ಗೆ ಅನೇಕ ಉತ್ತಮ ನಿರ್ಧಾರ ಮಾಡಿದ್ದೀರಿ. ಜಿಬಿಎ ರಚಿಸಿ ಭಾರತದ ದೊಡ್ಡ ನಗರಕ್ಕೆ ಸುಧಾರಣೆ ಮಾಡುತ್ತಿದ್ದೀರಿ. ನೀವು ಎಲ್ಲ ಕಾರ್ಯಗಳನ್ನ ಪೂರ್ಣಗೊಳಿಸುವ ವಿಶ್ವಾಸವಿದೆ ಎಂದು ಡಿಕೆ ಬೆಂಗಳೂರು ನಡಿಗೆ ಕಾರ್ಯಕ್ರಮದ ಕುರಿತ ಪೋಸ್ಟ್ ಟ್ಯಾಗ್ ಮಾಡಿ ಉದ್ಯಮಿ ಮೋಹನ್ ದಾಸ್ ಪೈ ಹೊಗಳಿದ್ದಾರೆ.

## ದೀಪೋತ್ಸವದಲ್ಲಿ ದ್ವೇಷ ಭಾಷಣ: ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಪ್ರಕರಣ

ಮಂಗಳೂರು: ಪುತ್ತೂರು ತಾಲೂಕಿನ ನಿವಾಸಿಯೊಬ್ಬರು ನೀಡಿದ ದೂರಿನ ಮೇರೆಗೆ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಮತ್ತು ಉಪ್ಪಳಿಗೆಯಲ್ಲಿ ನಡೆದ ದೀಪೋತ್ಸವ ಕಾರ್ಯಕ್ರಮದ ಆಯೋಜಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪುತ್ತೂರು ಗ್ರಾಮಾಂತರ ಪೊಲೀಸರು ಭಾನುವಾರ ಬಿಡುಗಡೆ ಮಾಡಿದ ಹೇಳಿಕೆ ಪ್ರಕಾರ, 'ಕಹಳೆ ನ್ಯೂಸ್' ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರವಾದ ಭಟ್ ಅವರ ಭಾಷಣವು 'ಧಾರ್ಮಿಕ ದ್ವೇಷವನ್ನು ಪ್ರಚೋದಿಸುತ್ತದೆ, ಮಹಿಳೆಯರ ಘನತೆಯನ್ನು ಅವಮಾನಿಸುತ್ತದೆ ಮತ್ತು ಸಾರ್ವಜನಿಕ ಶಾಂತಿಗೆ ಧಕ್ಕೆ ತರುತ್ತದೆ' ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಈ ಕಾರ್ಯಕ್ರಮ ಅಕ್ಟೋಬರ್ 20 ರಂದು ನಡೆದಿತ್ತು. ಭಟ್ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ್ದಾರೆ ಮತ್ತು ಮತದಾರರ ಸಂಖ್ಯೆಯನ್ನು ಉಲ್ಲೇಖಿಸಿದ್ದಾರೆ. ಇದ–ರಿಂದಾಗಿ ಧಾರ್ಮಿಕ ವೈಷಮ್ಯವನ್ನು ಬೆಳೆಸುತ್ತಿದ್ದಾರೆ ಎಂದು ಅದು ಆರೋಪಿಸಿದೆ.

ಅಕ್ಟೋಬರ್ 25 ರಂದು ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸಂಬಂಧಿತ ವಿಭಾಗಗಳನ್ನು ದ್ವೇಷವನ್ನು ಉತ್ತೇಜಿಸುವುದು, ಧಾರ್ಮಿಕ ನಂಬಿಕೆಗಳನ್ನು ಅವಮಾನಿಸುವುದು ಮತ್ತು ಸಾರ್ವಜನಿಕ ಶಾಂತಿಯನ್ನು ಭಂಗಗೊಳಿಸುವುದರ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

## 'ಕುಮಾರಸ್ವಾಮಿ ಖಾಲಿ ಟ್ರಂಕ್' ಡಿ.ಕೆ. ಶಿವಕುಮಾರ್ ಟೀಕೆ

ಬೆಂಗಳೂರು: "ಬೆಂಗಳೂರಿನ ಬಿ ಖಾತಾ ಆಸ್ತಿಗಳನ್ನು ಎ ಖಾತಾಗೆ ಪರಿವರ್ತನೆ ಮಾಡುತ್ತಿರುವ ಬಗ್ಗೆ ಇಲ್ಲಸಲ್ಲದ ಟೀಕೆ ಮಾಡುತ್ತಿರುವ ಕುಮಾರಸ್ವಾಮಿ ಖಾಲಿ ಟ್ರಂಕ್ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ವಾಗ್ದಾಳಿ ನಡೆಸಿದರು.

ಕಬ್ಬನ್ ಪಾರ್ಕ್ ನಲ್ಲಿ ಭಾನುವಾರ ನಡೆದ ಬೆಂಗಳೂರು ನಡಿಗೆ ಕಾರ್ಯಕ್ರಮದಲ್ಲಿ ಸಾರ್ವಜನಿಕರೊಂದಿಗೆ ಸಂವಾದ ನಡೆಸಿದ ಡಿಕೆ ಶಿವಕುಮಾರ್, ವಿದ್ಯಾವಂತರು 'ಎ ಖಾತಾ ಪರಿವರ್ತನೆ' ಒಪ್ಪುತ್ತಿರುವುದಕ್ಕೆ ಧನ್ಯವಾದ ಹೇಳಿದರು. ಈ ವೇಳೆ ನಾಗರಿಕರೊಬ್ಬರು, ಸರ್ಕಾರ ಎಲ್ಲಾ ಆಸ್ತಿಗಳನ್ನು ಎ ಖಾತಾ ಆಗಿ ಪರಿವರ್ತನೆ ಮಾಡುತ್ತಿರುವುದು ಒಳ್ಳೆಯ ಕೆಲಸ. ಈ ಪರಿವರ್ತನೆಗಾಗಿ ಅನೇಕರು, ಹಲವು ವರ್ಷಗಳಿಂದ ಕಾಯುತ್ತಿದ್ದರು ಎಂದು ಸರ್ಕಾರದ ತೀರ್ಮಾನವನ್ನು ಸ್ವಾಗತಿಸಿ, ಮುಕ್ತವಾಗಿ ಪ್ರಶಂಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಡಿಸಿಎಂ, "ಎ ಖಾತಾ ನಿಮ್ಮ ಆಸ್ತಿ ದಾಖಲೆ. ಸಾರ್ವಜನಿಕರ ಆಸ್ತಿ ದಾಖಲೆಗಳನ್ನು ಸರಿಪಡಿಸಿ, ಅವುಗಳನ್ನು ಜನರಿಗೆ ನೀಡುವುದು ನಮ್ಮ ಸರ್ಕಾರದ ಆರನೇ ಗ್ಯಾರಂಟಿ. ಇದಕ್ಕಾಗಿ ನಾವು ಕೇವಲ ಶೇ.5 ರಷ್ಟು ಮಾತ್ರ ಅಭಿವೃದ್ಧಿ ಶುಲ್ಕ ಪಾವತಿ ಮಾಡುವಂತೆ ಕೇಳಿದ್ದೇವೆ. ನಿಮ್ಮಂತಹ ಪ್ರಜ್ಞಾವಂತ ನಾಗರೀಕರು ಇದನ್ನು ಸ್ವಾಗತಿಸಿರುವುದಕ್ಕೆ ಧನ್ಯವಾದ ಎಂದರು.

ರಾಜ್ಯ ಸರ್ಕಾರ ಬಿ ಖಾತಾದಿಂದ ಎ ಖಾತಾ ಮಾಡುವ ಯೋಜನೆಗೆ ಜನರನ್ನು ಮೋಸ ಮಾಡುವ ಬಹುದೊಡ್ಡ ಲೂಟಿ ಎಂದು ಕೇಂದ್ರ ಸಚಿವ, ಜೆಡಿಎಸ್ ನಾಯಕ ಹೆಚ್ ಡಿ ಕುಮಾರಸ್ವಾಮಿ ಶುಕ್ರವಾರ ಟೀಕಿಸಿದ್ದರು.

## ಕುಮಾರಸ್ವಾಮಿಯವರನ್ನ ಮುಖ್ಯಮಂತ್ರಿ

(1ನೇ ಪುಟದಿಂದ) ಬೆಲೆ ಇಲ್ಲ ಎಂದು ಬೇಸರಿಸಿದರು.

ಜಿಲ್ಲೆಯಲ್ಲಿ ಕಾಂಗ್ರೆಸ್ ನಾಲ್ಕು ಸ್ಥಾನ ಗೆದ್ದಿದೆ, ಇದು ಶಾಶ್ವತ ಅಲ್ಲ. ಜನ ಮನಸ್ಸು ಮಾಡಿದ್ರೆ ಬದಲಾವಣೆ ಆಗೇ ಆಗುತ್ತೆ. ಇಲ್ಲಿ ನಡೆಯುವ ವಿಚಾರ ಇಡೀ ರಾಜ್ಯಕ್ಕೆ ಹೋಗುತ್ತೆ. ಇಲ್ಲಿ ಬೀದಿಬೀದಿಯಲ್ಲಿ ಚರ್ಚೆ ಮಾಡಿದ್ರೆ ಪಕ್ಷದ ಗೌರವ ಏನಾಗುತ್ತೆ? ಏನೇ ಸಮಸ್ಯೆ ಇದ್ರೂ ಪಕ್ಷದ ಚೌಕಟ್ಟಿನ ಒಳಗೆ ಚರ್ಚೆ ಮಾಡಿ. ಅಧಿಕಾರ ಇದ್ದಾಗ ಸಭೆಗೆ ಎಷ್ಟು ಜನ ಸೇರುತ್ತಿದ್ದರು. ಈಗ ಎಷ್ಟು ಜನ ಬಂದಿದ್ದಾರೆ ಎಂದರು.

# ಮಹಾರಾಷ್ಟ್ರದಲ್ಲಿ ವೈದ್ಯೆ ಆತ್ಮಹತ್ಯೆ : ಬಿಜೆಪಿ ಅಮಾನವೀಯ ಮುಖ ಬಯಲು: ರಾಹುಲ್



ಮುಂಬೈ : ಮಹಾರಾಷ್ಟ್ರದ ಸತಾರಾ ಜಿಲ್ಲೆಯಲ್ಲಿ 29 ವರ್ಷದ ವೈದ್ಯೆಯೊಬ್ಬರು ಅತ್ಯಾಚಾರ ಮತ್ತು ಕಿರುಕುಳದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡ ಘಟನೆ ದೇಶವನ್ನೇ ಬೆಚ್ಚಿಬೀಳಿಸಿದೆ.

ಈ ಘಟನೆ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ. ಇದನ್ನು ನಾಗರಿಕ ಸಮಾಜದ ಮನಃಸಾಕ್ಷಿಯನ್ನು ಅಲುಗಾಡಿಸುವ ದುರಂತ ಎಂದು ಬಣ್ಣಿಸಿದ್ದಾರೆ. ತಮ್ಮ ಟ್ವಿಟ್ಟರ್ ಖಾತೆಯಲ್ಲಿ ಈ ಬಗ್ಗೆ ಬರೆದುಕೊಂಡಿರುವ ಅವರು, ಈ ಘಟನೆಯನ್ನು ಸಂಸ್ಥಾಗತ ಹತ್ಯೆ ಎಂದು ಕರೆದಿದ್ದಾರೆ.

ಸತಾರಾದಲ್ಲಿ ಡಾ. ಸಂಪದಾ ಮುಂಡೆ ಎಂಬ ಯುವ ವೈದ್ಯೆ ಅತ್ಯಾಚಾರ ಮತ್ತು ಕಿರುಕುಳದಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರು ಇತರರ ನೋವನ್ನು ನಿವಾರಿಸುವ ಕನಸು ಕಂಡಿದ್ದ ಒಬ್ಬ ಪ್ರತಿಭಾವಂತ ವೈದ್ಯೆಯಾಗಿದ್ದರು. ಆದರೆ, ಭ್ರಷ್ಟ ವ್ಯವಸ್ಥೆ ಮತ್ತು ಅಧಿಕಾರದಲ್ಲಿರುವವರ ದುರುದ್ದೇಶಕ್ಕೆ ಬಲಿಯಾಗಿದ್ದಾರೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಸಾರ್ವಜನಿಕರನ್ನು ರಕ್ಷಿಸಬೇಕಾದ ಸರಕಾರವೇ ಈ ಅಮಾಯಕ ಮಹಿಳೆಯ ಮೇಲೆ ಅತ್ಯಾಚಾರ ಮತ್ತು ಶೋಷಣೆಯಂತಹ ಹೀನ ಕೃತ್ಯ ಎಸಗಿದೆ ಎಂದು ಸರಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಬಿಜೆಪಿ ಸರಕಾರದ ಅಮಾನವೀಯ ಮುಖ

ವರದಿಗಳ ಪ್ರಕಾರ, ಬಿಜೆಪಿ ಜೊತೆ ಗುರುತಿಸಿಕೊಂಡಿದ್ದ ಕೆಲವು ಪ್ರಭಾವಿ ವ್ಯಕ್ತಿಗಳು ಆಕೆಗೆ ಲಂಚಕ್ಕೆ ಒತ್ತಾಯಿಸಿದ್ದರಂತೆ. ಇದು ಅಪರಾಧಿಗಳನ್ನು ರಕ್ಷಿಸುವ ಸಿದ್ಧಾಂತದ ಅತ್ಯಂತ ಹೇಯ ಉದಾಹರಣೆಯಾಗಿದೆ. ಇದು ಆತ್ಮಹತ್ಯೆಯಲ್ಲ, ಇದು ಸಂಸ್ಥಾಗತ ಹತ್ಯೆ ಎಂದು ಗಾಂಧಿ ಅಭಿಪ್ರಾಯಪಟ್ಟಿದ್ದಾರೆ. ಅಧಿಕಾರವೇ ಅಪರಾಧಿಗಳಿಗೆ ರಕ್ಷಾ ಕವಚವಾದಾಗ, ನ್ಯಾಯವನ್ನು ಯಾರಿಂದ ನಿರೀಕ್ಷಿಸಲು ಸಾಧ್ಯ? ಡಾ. ಸಂಪದಾ ಅವರ ಸಾವು ಈ ಬಿಜೆಪಿ ಸರಕಾರದ ಅಮಾನವೀಯ ಮತ್ತು ಸಂವೇದನಾಶೂನ್ಯ ಮುಖವನ್ನು ಬಯಲು ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಸಲ್ಮಾನ್ ಖಾನ್ ಈಗ ...

(1ನೇ ಪುಟದಿಂದ) ಸಿನಿಮಾದ ಜಾಗತಿಕ ವ್ಯಾಪ್ತಿಯ ಬಗ್ಗೆ ಮಾತನಾಡುವಾಗ, ಬಲೂಚಿಸ್ತಾನ್ ಮತ್ತು ಪಾಕಿಸ್ತಾನವನ್ನು ಪ್ರತ್ಯೇಕವಾಗಿ ಉಲ್ಲೇಖಿಸಿದ್ದರು. ಹೀಗಾಗಿ, ಪಾಕಿಸ್ತಾನ ಸರ್ಕಾರ ಅವರನ್ನು 'ಭಯೋತ್ಪಾದಕ' ಎಂದು ಘೋಷಿಸಿದೆ.

ಸಲ್ಮಾನ್ ಅವರನ್ನು ಪಾಕಿಸ್ತಾನದ 1997 ರ ಭಯೋತ್ಪಾದನಾ ನಿಗ್ರಹ ಕಾಯ್ದೆಯ 4ನೇ ವೇಳಾಪಟ್ಟಿಯ ಅಡಿಯಲ್ಲಿ ಸೇರಿಸಲಾಗಿದೆ. ಭಯೋತ್ಪಾದನೆಯೊಂದಿಗೆ ಸಂಪರ್ಕ ಹೊಂದಿದ್ದಾರೆ ಎಂಬ ಆರೋಪದ ಮೇಲೆ ಕಟ್ಟುನಿಟ್ಟಿನ ನಿಗಾದಲ್ಲಿರುವ ವ್ಯಕ್ತಿಗಳಿಗೆ ಈ ವರ್ಗವನ್ನು ಕಾಯ್ದಿರಿಸಲಾಗಿದೆ.

# ಭಗವದ್ಗೀತಾ ಅಭಿಯಾನಕ್ಕೆ ಚಾಲನೆ



ದಾ ನಗರವಾಣಿ ಸುದ್ದಿ


ದಾವಣಗೆರೆ.ಅ.25: ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದಿಂದ ಕೈಗೊಂಡಿರುವ ಭಗವದ್ಗೀತಾ ಅಭಿಯಾನಕ್ಕೆ ಶನಿವಾರ ನಗರದ ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿ ಚಾಲನೆ ನೀಡಲಾಯಿತು.

ಅಭಿಯಾನವನ್ನು ಜಿಲ್ಲಾ ಭಗವದ್ಗೀತಾ ಅಭಿಯಾನದ ಗೌರವಾಧ್ಯಕ್ಷ ಡಾ.ಎಸ್.ಆರ್. ಹೆಗಡೆ ಉದ್ಘಾಟಿಸಿದರು. ಈವರೆಗೆ ಅಭಿಯಾನವು ಯಶಸ್ವಿಯಾಗಿ ನಡೆದುಕೊಂಡು ಬಂದಿದ್ದು, ಈ ವರ್ಷವೂ ವಿದ್ಯಾರ್ಥಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಸಲಹೆ ನೀಡಿದರು.

ವಿದ್ವಾನ್ ಶ್ರೀ ಗಣೇಶ್ ನಡುಗೋಡು ಭಗವದ್ಗೀತೆ ಕುರಿತು ಉಪನ್ಯಾಸ ನೀಡಿದರು. ವಿದ್ವಾನ್ ಶ್ರೀ ಶಂಕರಾನಂದ ಅಭಿಯಾನದ ಕುರಿತು ವಿವರಿಸಿದರು. ಮಹಿಳೆಯರು ಮತ್ತು ಪುರುಷರು ಭಗವದ್ಗೀತೆ 11ನೇ ಅಧ್ಯಾಯದ ಶ್ಲೋಕಗಳನ್ನು ಪಠಿಸಿದರು. ಅಭಿಯಾನದ ಸಂಚಾಲಕ ಭಾಸ್ಕರ್ ಹಿರಿಯ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿರುವ ತಾಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದ ಭಗವದ್ಗೀತಾ ಸ್ಪರ್ಧೆಗಳ ಮಾಹಿತಿ ನೀಡಿದರು.


ಅಭಿಯಾನದ ಜಿಲ್ಲಾ ಕಾರ್ಯಾಧ್ಯಕ್ಷ ಎಸ್.ಟಿ.ಕುಸುಮಶ್ರೇಷ್ಠಿ, ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಡಾ.ಎಂ.ಸಿ.ಶಶಿಕಾಂತ್, ಗೀತಾ ಭಟ್, ಕೆ.ಎಸ್.ಸತೀಶ್ ಚಂದ್ರ, ಬಾಲಕೃಷ್ಣ ವೈದ್ಯ, ರಾಮಚಂದ್ರರಾವ್, ಅನಿಲ್ ಬಾರಂಗಲ್ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

**ವಸಂತ** 4K DOLBY ATMOS
ದಿನ 4 ಆಟಗಳು
21-10-2025ರಿಂದ ಪ್ರಾರಂಭ
Tickets are available in Paytm
ತಮಿಳು ಚಿತ್ರ
ಚಿತ್ರ ಪ್ರದರ್ಶನ ಸಮಯ: ಬೆ.11ಕ್ಕೆ, ಮ:2ಕ್ಕೆ, ಸಂ.6ಕ್ಕೆ, ರಾ.9ಕ್ಕೆ




ರಶ್ಮಿಕಾ ಮಂದಣ್ಣ ನಟಿಸಿರುವ ಚಿತ್ರ: THAMMA

**ಅಶೋಕ** DOLBY DIGITAL dts
ದಿನ 4 ಆಟಗಳು
24-10-2025ರಿಂದ ಪ್ರಾರಂಭ
ticket avabale bookmyshow
ಕನ್ನಡ ಚಿತ್ರ
ಸಮಯ: ಬೆ:–11ಕ್ಕೆ, ಮ–2ಕ್ಕೆ ಸಂ–6ಕ್ಕೆ,: ರಾ–9ಕ್ಕೆ




ಗೋಲ್ಡನ್ ಕ್ಲಾಸ್: 250 ರೂ, ಬಾಲ್ಕನಿ: 200 ರೂ, ಫಸ್ಟ್ ಕ್ಲಾಸ್: 150 ರೂ

**ಗೀತಾಂಜಲಿ** DOLBY DIGITAL dts
ದಿನ 4 ಆಟಗಳು
ಭರ್ಜರಿ ಜನಭರಿತ 4ನೇ ವಾರ
ಕನ್ನಡ ಚಿತ್ರ




ರಿಷಬ್ ಶೆಟ್ಟಿ, ರುಕ್ಮಿಣಿ ವಸಂತ್ ನಟಿಸಿರುವ ಚಿತ್ರ:
ಕಾಂತಾರ ಅಧ್ಯಾಯ-1
bookmyshow
ಮತ್ತು ಪ್ರತಿದಿನ ಚಿತ್ರ ಮಂದಿರದಲ್ಲಿ ಮುಂಗಡವಾಗಿ ಟಿಕೆಟ್ ನೀಡಲಾಗುವುದು.
ಬಾಲ್ಕನಿ: 150 ರೂ
ಫಸ್ಟ್ ಕ್ಲಾಸ್: 120 ರೂ

**ವಾಟ್ಸಾಪ್ ಕತೆಗಳು**

## ನಾವು ಕೊಟ್ಟಿದ್ದೇ ನಮಗೆ ದೊರಕುವುದು

ಬೆಳಗಾಯಿತು. ಮುರುಕು ಗುಡಿಸಲಲ್ಲಿ ಮಲಗಿದ್ದ ಭಿಕ್ಷುಕನೊಬ್ಬ ಭಿಕ್ಷೆ ಬೇಡಲು ಹೊರಡಬೇಕು ಎಂದುಕೊಂಡು ಹೊದ್ದಿದ್ದ ಹಳೆಯ ಹೊದಿಕೆಯನ್ನು ಚೀಲದಲ್ಲಿ ತುಂಬಿಕೊಂಡ , ನೆಗ್ಗು ನುಗ್ಗಾದ ಪಾತ್ರೆ ಹಿಡಿದುಕೊಂಡು ಭಿಕ್ಷೆ ಬೇಡಲು ಹೊರಟ. ಯಾ–ಕೋ ಅವನಿಗೆ ತುಂಬಾ ಬೇಜಾರಾಗಿತ್ತು. ಇದೇನು ಹಣೆಬರಹ ವಯಸ್ಸಾಗುತ್ತಾ ಬಂತು ಮೈಯಲ್ಲಿ ಶಕ್ತಿ ಇಲ್ಲ. ಆದರೆ ಬೇಡಲೇಬೇಕು ವಿಧಿಯಿಲ್ಲ. ಯಾರಾದರೂ ಸ್ವಲ್ಪ ಸಹಾಯ ಮಾಡಿ, ನಿತ್ಯವೂ ಭಿಕ್ಷೆ ಬೇಡುವ ವೃತ್ತಿಯಿಂದ ತಪ್ಪಿಸಿದರೆ, ಬೆಚ್ಚನೆ ಗುಡಿಸಲು ಹಾಕಿಕೊಂಡು ನೆಮ್ಮದಿಯಾಗಿ ದಿನಗಳನ್ನು ಕಳೆಯಬಹುದಿತ್ತು ಎಂದು ಚಿಂತಿಸುತ್ತಲೇ ಸುತ್ತುತ್ತಾ ಒಂದು ಪಟ್ಟಣದ ಬೀದಿಗೆ ಬಂದು ಒಂದು ಬದಿಯಲ್ಲಿ ಕುಳಿತುಕೊಂಡನು. ಇಲ್ಲಿ ಸಾಕಷ್ಟು ಜನ ಓಡಾಡುತ್ತಾರೆ ಏನಾದರೂ ಒಂದಿಷ್ಟು ಸಿಗಬಹುದು ಎಂದುಕೊಂಡ.

ಮುಂಜಾನೆಯ ಕತ್ತಲು ಕಳೆದು ಸೂರ್ಯನು ಅಲ್ಲಲ್ಲೆ ಇಣುಕಿ ಹೊರಗೆ ಬರುತ್ತಿದ್ದಾನೆ. ಇದ್ದಕ್ಕಿದ್ದಂತೆ ಪ್ರಮುಖ ರಸ್ತೆಯಲ್ಲಿ ಜನ ಸಂಚಾರ ಹೆಚ್ಚಿತು, ಮಾತುಕತೆಗಳು ಜೋರಾಯಿತು ಗಡಿಬಿಡಿ ಹೆಚ್ಚಾಯಿತು. ದೂರದಲ್ಲಿ ಅರಮನೆ ರಕ್ಷಣಾ ಪಡೆಗಳು ಜನರನ್ನು ಆಚೀಚೆ ಸರಿಸುತ್ತಿದ್ದಾರೆ, ಹಿಂದೆ ರಾಜ ದರ್ಬಾರಿನವರು ಬರುತ್ತಿದ್ದಾರೆ. ಮೈಕಿನಲ್ಲಿ ಮಹಾರಾಜರು ಬರುತ್ತಿದ್ದಾರೆ. ದೂರದಲ್ಲಿ ನಿಂತು ಅವರ ದರ್ಶನ ಮಾಡಿ ಎಂದು ಕೂಗುತ್ತಿದ್ದಾರೆ. ಭಿಕ್ಷಕನಿಗೂ ರಾಜನನ್ನು ನೋಡುವ ಆಸೆ ಆಯಿತು ಕುಳಿತಲ್ಲಿಂದ ಎದ್ದು ಮಹಾರಾಜರು ಬರುವುದು ಕಾಣುವಂತೆ ರಸ್ತೆಯ ತುದಿಯಲ್ಲಿ ನಿಂತ.

ಆತನಿಗೆ ಮಹಾರಾಜರನ್ನು ಕಾಣುವ ಆಸೆ ಒಂದಾದರೆ, ಅಕಸ್ಮಾತ್ ತಾನು ಅವರ ದೃಷ್ಟಿಗೆ ಬಿದ್ದರೆ, ಅವರು ಒಂದಷ್ಟು ಕೈಯೆತ್ತಿ ಕೊಟ್ಟರೆ, ತಾನು ಈಗ ಅಂದುಕೊಂಡ. ಏನಾದರಾಗಲಿ ಕಣ್ತುಂಬ ನೋಡುವ ಅವಕಾಶವಾದರೂ ಸಿಕ್ಕರೆ ಸಾಕು ಎಂದು ಎಲ್ಲಾ ಜನಗಳನ್ನು ತಳ್ಳಿಕೊಂಡು ಮುಂದೆ ಬಂದು ನಿಂತನು. ಸ್ವಲ್ಪ ಹೊತ್ತಿಗೆ ದೂರದಲ್ಲಿ ಮಹಾರಾಜ ಬರುತ್ತಿರುವುದು ಕಾಣಿಸಿತು. ಅದೇನು ಮೈತುಂಬ ಜಗಮಗ ಒಡವೆಯ ರಾಶಿ. ಅದರ ಮೇಲೆ ಸೂರ್ಯನ ಬೆಳಕು ಬಿದ್ದು ಕಣ್ಣಿಗೆ ಫಳಕ್ ಫಳಕ್ಕೆಂದು ಮಿಂಚಿನಂತೆ ಹೊಳೆಯುತ್ತಿದೆ. ಅದೆಂಥ ವೈಭೋಗ, ಸೂರ್ಯ ತೇಜಸ್ಸು. ಅವರ ದೃಷ್ಟಿ ನನ್ನ ಕಡೆಗೆ ಬಿದ್ದೀತೇ? ಇಷ್ಟೇ ಅಂದುಕೊಂಡ ಅದೇನು ಭಿಕ್ಷುಕನ ಅದೃಷ್ಟವೂ ಎಂಬಂತೆ, ಮಹಾರಾಜ ಭಿಕ್ಷುಕನ್ನೇ ನೋಡಿದ, ಇಷ್ಟೆ ಅಲ್ಲ ಭಿಕ್ಷುಕನನ್ನು ನೋಡಿ ಮುಗುಳ್ನಗೆ ಬೀರಿದ. ಅದನ್ನು ಕಂಡು ಭಿಕ್ಷುಕನಿಗೆ ರೋಮಾಂಚನವಾಯಿತು. ಸುತ್ತಲಿದ್ದವರು ಇದೇನಿದು ಮಹಾರಾಜರು ಭಿಕ್ಷುಕನನ್ನು ನೋಡಿ ನಗುವುದು ಎಂದರೇನು? ಆಶ್ಚರ್ಯಚಕಿತರಾದರು.

ಮಹಾರಾಜನ ಹೊನ್ನಿನ ರಥ ಇನ್ನು ಸ್ವಲ್ಪ ಹತ್ತಿರ ಬಂದಿತು. ನಿಲ್ಲಿಸುವಂತೆ ಸಾರಥಿಗೆ ಹೇಳಿದ. ಮಹಾರಾಜನು ರಥದಿಂದ ಇಳಿದು ನೇರವಾಗಿ ಭಿಕ್ಷುಕನ ಮುಂದೆ ಬಂದು ನಿಂತನು. ಭಿಕ್ಷುಕನಿಗೆ ಒಂದು ಕ್ಷಣ ಎದೆ ಧಸಕ್ಕೆಂದಿತು. ಇನ್ನು ನನ್ನ ಕಷ್ಟ ಕಾಲವೆಲ್ಲ ಮುಗಿಯಿತು. ಇದುವರೆಗೂ ಕನಸು ಎಂದುಕೊಂಡಿದ್ದು ನನಸಾಗುವ ಕಾಲ ಬಂದಿತು ಎಂದು ಸಂತಸಗೊಂಡ. ಆದರೆ ರಾಜ ಭಿಕ್ಷುಕನಿಗೆ ಕೊಡುವ ಬದಲು, ಅವನೇ ಭಿಕ್ಷುಕನ ಮುಂದೆ ಕೈಚಾಚಿ ನನಗೆ ಏನು ಕೊಡ್ತೀಯಾ? ಕೊಡು ಎಂದು ಕೇಳಿದಾಗ, ಒಂದು ಕ್ಷಣ ಕಕ್ಕಾಬಿಕ್ಕಿಯಾದ ಭಿಕ್ಷುಕ, ಇದೇನಿದು ರಾಜರು ನನಗೆ ಕೊಡುತ್ತಾರೆ ಅಂದು–ಕೊಂಡರೆ ಅವರೇ ನನ್ನಂಥ ಭಿಕ್ಷುಕನ ಮುಂದೆ ಕೈಚಾಚಿ ಕೇಳುತ್ತಾರಲ್ಲ, ನನ್ನ ಹತ್ತಿರ ಏನು ಇಲ್ಲ ಎಂದು ಹೇಳುವುದಾದರೂ ಹೇಗೆ? ಕೊನೆಗೆ ತನ್ನ ಹತ್ತಿರವಿದ್ದ ಭಿಕ್ಷಾ ಪಾತ್ರೆಯನ್ನು ತೆಗೆದು ನೋಡಿದ. ಅದರಲ್ಲಿ ಸಣ್ಣ ಹಿಡಿಯಷ್ಟು ಧಾನ್ಯಗಳಿತ್ತು ಅದನ್ನು ಕೊಡುವ ಮನಸ್ಸು ಅವನಿಗೆ ಇರಲಿಲ್ಲ, ಅದರಲ್ಲೇ ಎರಡು ಕಾಳು ಆರಿಸಿ ಕೊಡಲಾರದ ಮನಸ್ಸಿನಿಂದ ರಾಜನ ಕೈಗೆ ಕೊಟ್ಟ. ರಾಜನು ಮುಗುಳ್ನಕ್ಕು ಅದನ್ನೇ ತೆಗೆದುಕೊಂಡು ಹೋಗಿ ಚಿನ್ನದ ರಥವೇರಿ ಕುಳಿತು ಹೊರಟುಹೋದನು.

ಭಿಕ್ಷುಕನು, ಇವನೆಂಥ ರಾಜ? ಕೊಡುವುದರ ಬದಲು ನನ್ನ ಭಿಕ್ಷೆಯಲ್ಲಿ ಬೇಡಿ ಎರಡು ಕಾಳು ತೆಗೆದುಕೊಂಡು ಹೋದ ಎಂದು ಬೇಸರ ಪಟ್ಟು–ಕೊಂಡು ತನ್ನ ಮುರುಕಲು ಗುಡಿಸಲ ಮನೆಗೆ ಹೋದ. ಗುಡಿಸಲ ಮುಂದೆ ಬೆಳಕಿನಲ್ಲಿ ಕುಳಿತು, ಅಂದು ಬೇಡಿದ ಭಿಕ್ಷೆಯಲ್ಲಿ ಎಷ್ಟು ಬಂದಿದೆ ಎಂದು ನೋಡಲು ತನ್ನ ಜೋಳಿಗೆಯಿಂದ ತೆಗೆದು ಇನ್ನೊಂದು ಪಾತ್ರೆಗೆ ಹಾಕುತ್ತಿದ್ದ. ಹೀಗೆ ಹಾಕುತ್ತಿರುವಾಗ ಕಣ್ಣಿಗೇನು ಫಳಫಳ ಹೊಳೆದಂತೆ ಕಂಡಿತು. ಏನೆಂದು ತೆಗೆದು ನೋಡಲು ಅದು ಬಂಗಾರದ ಧಾನ್ಯವಾಗಿತ್ತು. ಮತ್ತೆ ತೆಗೆದು ನೋಡಿದಾಗ ಇನ್ನೊಂದು ಬಂಗಾರದ ಧಾನ್ಯ ಸಿಕ್ಕಿತು. ಮತ್ತೆ ಮತ್ತೆ ನೋಡಿದರೆ ಏನೂ ಇರಲಿಲ್ಲ. ಎಷ್ಟೇ ಹುಡುಕಿದರೂ ಸಿಗಲಿಲ್ಲ. ಕುಸಿದು ಕುಳಿತು ಬಿಕ್ಕಿ ಬಿಕ್ಕಿ ಅಳಲು ಶುರುಮಾಡಿದ. ದೇವರೇ ನಾನು ರಾಜನಿಗೆ ಕೊಟ್ಟ ಎರಡು ಧಾನ್ಯಗಳು ಬಂಗಾರದ ಧಾನ್ಯಗಳು ಆಗಿವೆ. ನನ್ನಲ್ಲಿರುವ ಎಲ್ಲಾ ಧಾನ್ಯಗಳನ್ನು ಕೊಟ್ಟಿದ್ದರೆ? ಅಯ್ಯೋ ದೇವರೇ ನನ್ನ ಕ್ಷುಲ್ಲಕ ಬುದ್ಧಿಗೆ ತಕ್ಕ ಶಾಸ್ತಿ ಆಯಿತು. ಎಂದು ದುಃಖಿಸುತ್ತ ಕುಳಿತನು.

ನಾವು ಜಗತ್ತಿಗೆ ಎಷ್ಟು ಕೊಡುತ್ತೇವೆಯೋ ಅಷ್ಟನ್ನೂ ಭಗವಂತ ಕೊಟ್ಟೇ ಕೊಡುತ್ತಾನೆ.

"ಯೇ ತ್ವೇತದಭ್ಯ ಸೂಯಂತೋ ನಾನು ತಿಷ್ಠಂತಿ ಮೇ ಮತಂ!

ಸರ್ವಜ್ಞಾನ ವಿಮೂಢಾಂಸ್ತಾನ್ ವಿದ್ಧಿ ನಷ್ಟಾನ ಚೇತಸಹ"

ಕೃಪೆ, ಬರಹ:–ಆಶಾ ನಾಗಭೂಷಣ

ಸಂಗ್ರಹ: ವೀರೇಶ್ ಅರಸೀಕೆರೆ.

## ಶಿಕ್ಷಣ ಇಲಾಖೆಯಿಂದ ನಾಳೆ ತಾಲ್ಲೂಕು ಮಟ್ಟದ ಕ್ರೀಡಾ ಕೂಟ

ಹರಿಹರ: ನಗರದ ತಾಲ್ಲೂಕು ಕ್ರೀಡಾಂಗಣದಲ್ಲಿ ಅ.28 ರಂದು ಬೆಳಿಗ್ಗೆ 10ಕ್ಕೆ ಶಾಲಾ ಶಿಕ್ಷಣ ಇಲಾಖೆಯಿಂದ 14 ರಿಂದ 17 ವಯೋಮಿತಿಯ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ವಿದ್ಯಾರ್ಥಿಗಳ ತಾಲ್ಲೂಕು ಮಟ್ಟದ ಕ್ರೀಡಾ ಕೂಟವನ್ನು ಆಯೋಜಿಸಿದೆ.

ಶಾಸಕ ಬಿ.ಪಿ.ಹರೀಶ್ ಉದ್ಘಾಟಿಸುವರು. ನಗರಸಭೆ ಅಧ್ಯ–ಕ್ಷೆ ಕವಿತಾ ಮಾರುತಿ ಬೇಡರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಿ.ಕೊಟ್ರೇಶ್, ಡಯಟ್ ಉಪನಿರ್ದೇಶಕಿ ಗೀತಾ ಎಸ್., ಬಿಇಒ ದುರುಗಪ್ಪ ಡಿ. ವಿವಿಧ ಜನಪ್ರತಿನಿಧಿಗಳು ಅಧಿಕಾರಿಗಳು ಮುಖ್ಯ ಅತಿಥಿಯಾಗಿ ಭಾಗವಹಿಸುವರೆಂದು ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ವಿಜಯಕುಮಾರ್ ಎ. ತಿಳಿಸಿದ್ದಾರೆ.

**ಮನೆಗೊಂದು ಮರ ಊರಿಗೊಂದು ವನ**

# ದೇಶದಲ್ಲಿ ರಾಷ್ಟ್ರೀಯ ಭಗತ್ ಸಿಂಗ್ ಎಂಪ್ಲಾಯ್ಮೆಂಟ್ ಗ್ಯಾರಂಟಿ ಆಕ್ಟ್ ಜಾರಿಯಾಗಲಿ: ಸಂತೋಷ್ ಆಗ್ರಹ




ದಾ ನಗರವಾಣಿ ಸುದ್ದಿ

ದಾವಣಗೆರೆ: ದೇಶದಲ್ಲಿ ರಾಷ್ಟ್ರೀಯ ಭಗತ್ ಸಿಂಗ್ ಎಂಪ್ಲಾಯ್ಮೆಂಟ್ ಗ್ಯಾರಂಟಿ ಆಕ್ಟ್ ಜಾ–ರಿಯಾಗಲಿ ಎಂದು ಎ ಐ ವೈ ಎಫ್ ರಾಜ್ಯ ಕಾರ್ಯದರ್ಶಿ ಹೆಚ್ ಎಂ ಸಂತೋಷ್ ಆಗ್ರಹಿಸಿದರು.

ಭಾನುವಾರ ನಗರದ ಪಂಪಾಪತಿ ಭವನದಲ್ಲಿ ನಡೆದ ಅಖಿಲ ಭಾರತ ಯುವಜನ ಫೆಡರೇಶನ್‌ನ 11ನೇ ದಾವಣಗೆರೆ ಜಿಲ್ಲಾ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಭಗತ್ ಸಿಂಗ್, ರಾಜಗುರು, ಸುಖದೇವ್ ಅವರ ಕನಸನ್ನು ಸಾಕಾರ ಗೊಳಿಸಬೇಕು ದೇಶದಲ್ಲಿ ಧರ್ಮ, ಕೋಮುವಾದ, ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ದಬ್ಬಾಳಿಕೆ ನಡೆಸುತ್ತಾ ಬಂಡವಾಳ ಶಾಹಿ ವ್ಯವಸ್ಥೆ ಪ್ರಭುತ್ವ ಸಾಧಿಸುತ್ತಿದ್ದು, ಬಂಡವಾಳ ಶಾಹಿ, ವೈದಿಕ ಶಾಹಿ ವ್ಯವಸ್ಥೆಯಿಂದ ಯುವ ಜನಾಂಗ ಜಾಗೃತಗೊಂಡು ಸಂವಿಧಾನಬದ್ಧ ಹಕ್ಕುಗಳಿಗಾಗಿ ಸಂಘಟಿತ ಹೋರಾಟ ಮಾಡುವುದು ಅನಿವಾರ್ಯ ಎಂದು ಕರೆ ನೀಡಿದರು.

ಸರ್ಕಾರಿ ಸ್ವಾಮ್ಯದಲ್ಲಿನ ಕಂಪನಿಗಳು ಖಾಸಗೀಕರಣಗೊಳ್ಳುತ್ತಿವೆ, ಇದರಿಂದ ಸಾರ್ವಜನಿಕ ಕ್ಷೇತ್ರದಲ್ಲಿ ಉದ್ಯೋಗ ಭದ್ರತೆಗೆ ಕೊಡಲಿ ಪೆಟ್ಟು ಬೀಳುತ್ತಿದೆ. ಸರ್ಕಾರಿ ಶಾಲೆ, ಆಸ್ಪತ್ರೆ, ರೈಲ್ವೆ ಬ್ಯಾಂಕ್ ಕ್ಷೇತ್ರಗಳನ್ನು ಖಾಸಗೀಕರಣದಿಂದ ತಪ್ಪಿಸಬೇಕು, ದಾವಣಗೆರೆಯಲ್ಲಿ ಒಂದು ಕಾಲದಲ್ಲಿ ಸಾರ್ವಜನಿಕ ಕಂಪನಿಗಳಿಂದ ಬಡವರು ಬದುಕು ಕಟ್ಟಿಕೊಂಡಿದ್ದ ಇತಿಹಾಸವಿದೆ ಪ್ರಸಕ್ತ ಆಡಳಿತವ್ಯವಸ್ಥೆಯಿಂದಯುವಕರಬದುಕು ಬೀದಿಗೆ ಬೀಳುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸನಾತನ ಧರ್ಮದ ಸಂಸ್ಕೃತಿಯ ಮೇಲೆ, ದೇಶ ಕಟ್ಟುವುದು ದೇಶಪ್ರೇಮವಲ್ಲ. ಮಹಿಳೆಯರಿಗೆ ಸಮಾನತೆ, ಬಹುತ್ವ ಉಳಿಸುವುದು, ರೈತರ ಬೆಳೆಗೆ ಸೂಕ್ತ ಬೆಂಬಲ ಬೆಲೆ ನೀಡುವುದು ಯುವ ಜನರಿಗೆ ಉದ್ಯೋಗ ಭದ್ರತೆ ನೀಡುವುದು ದೇಶಪ್ರೇಮವಾಗಿದೆ. ದೇಶದಲ್ಲಿ ಸಂಘ ಪರಿವಾರದವರ ಮಕ್ಕಳು ಉನ್ನತ ವ್ಯಾಸಂಗ, ಐಶಾರಾಮಿ ಜೀವನ ಸಾಗಿಸುತ್ತಿದ್ದಾರೆ ಕೋಮುವಾದ ಧರ್ಮಾಂಧತೆಯಲ್ಲಿ ಸಿಲುಕಿ ಬಡವರ ಮಕ್ಕಳು ದಿವಾಳಿಯಾಗುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಸಮ್ಮೇಳನವನ್ನು ಉದ್ಘಾಟಿಸಿ ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ಮಾತನಾಡಿ, ಯುವಕರು ಬದುಕಿನ ಹಕ್ಕಿಗಾಗಿ ಹೋರಾಟ ಮನೋಭಾವ ಮೈಗೂಡಿಸಿಕೊಳ್ಳಬೇಕಿದೆ. ಸಮಾಜದಲ್ಲಿನ ಅಶಾಂತಿ,ಅಸಮಾನತೆ,ನಿರುದ್ಯೋಗ ತಾಂಡವವಾಡುತ್ತಿದ್ದು ಸಂಘಟಿತ ಹೋರಾಟ ನಡೆಸಬೇಕಿದೆ, ರಾಜಕೀಯ ಪ್ರಜ್ಞೆ ಅಳವಡಿಸಿಕೊಂಡು ದೇಶದ ಹಿತ ಕಾಯುವ ಪಕ್ಷವನ್ನು ಆಡಳಿತಕ್ಕೆ ತರಬೇಕು ಎಂದು ಕರೆ ನೀಡಿದರು. ದೇಶದಲ್ಲಿ ಕೇಂದ್ರದಲ್ಲಿನ ಬಿಜೆಪಿ ಆಡಳಿತ ಸರ್ಕಾರ ಚುನಾವಣೆ ವೇಳೆ ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಸೃಷ್ಟಿಯ ಭರವಸೆ ಹುಸಿಯಾಗಿದೆ. ಬಡ, ಶೋಷಿತ, ಮಹಿಳೆ, ರೈತ ಕಾರ್ಮಿಕರ , ವಿದ್ಯಾರ್ಥಿ ಯುವಜನರ ಹಕ್ಕುಗಳನ್ನು ಕಸಿಯುವ ಹುನ್ನಾರ ನಡೆಯುತ್ತಿದೆ ಎಂದು ಆರೋಪಿಸಿದರು.

ಕಾಂ ಸುರೇಶ್ ಶೇಖರಪ್ಪ ಪಂಪಾಪತಿ ರೈತ ಕಾರ್ಮಿಕರ ಕಲ್ಯಾಣ ಅಭಿವೃದ್ಧಿ ಟ್ರಸ್ಟ್‌ನ ಖಜಾಂಚಿ ಎಲ್ಲಪ್ಪ ಧ್ವಜಾರೋಹಣ ನೆರವೇರಿಸಿದರು. ಇಪ್ಟಾ ರಾಜ್ಯ ಕಾರ್ಯದರ್ಶಿ ಪಿ ಷಣ್ಮುಖ ಸ್ವಾಮಿ, ಎ ಐ ಡಿ ಆರ್ ಎಂ ವಿ ಜಿಲ್ಲಾ ಗೌರವಾಧ್ಯಕ್ಷ ವಿ ಲಕ್ಷ್ಮಣ, ಮಹಿಳಾ ಒಕ್ಕೂಟ–ದ ಜಿಲ್ಲಾಧ್ಯಕ್ಷೆ ಸರೋಜಾ, ಕೃಷಿ ಕಾರ್ಮಿಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನರೇಗಾ ರಂಗನಾಥ, ಅಖಿಲ ಭಾರತ ಕಿಸಾನ್ ಸಭಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಐರಣಿ ಚಂದ್ರು, ಎ ಐ ಎಸ್ ಎಫ್ ಸಂಘಟನೆ ಜಿಲ್ಲಾಧ್ಯಕ್ಷ ಮಾದಿಹಳ್ಳಿ ಮಂಜುನಾಥ, ಇಪ್ಟಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ ಬಾನಪ್ಪ ವೇದಿಕೆಯಲ್ಲಿದ್ದು ಮಾತನಾಡಿ ಸಮ್ಮೇಳನಕ್ಕೆ ಶುಭ ಹಾರೈಸಿದರು.

ಎ ಐ ವೈ ಎಫ್ ಜಿಲ್ಲಾಧ್ಯಕ್ಷ ಕೆರನಹಳ್ಳಿ ರಾಜು ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಎ ಐ ವೈ ಎಫ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ ತಿಪ್ಪೇಶ್ ಎಲ್ಲರನ್ನು ಸ್ವಾಗತಿಸಿ ಕಾರ್ಯಕ್ರಮವನ್ನು ನಿರೂಪಿಸಿದರು. ಕೊನೆಯಲ್ಲಿ ಎ ಐ ವೈ ಎಫ್ ಜಿಲ್ಲಾ ಮುಖಂಡ ಮಳಲಕೆರೆ ರುದ್ರೇಶ್ ಎಲ್ಲರನ್ನು ವಂದಿಸಿದರು.

# ಡಾ. ಜಿ.ಜೆ. ಮೆಹೆಂದಳೆಯವರಿಗೆ ರಬೀಂದ್ರ ರತ್ನ ಪುರಸ್ಕಾರ



ಹರಿಹರ: ಸಮೀಪದ ಕುಮಾರ ಪಟ್ಟಣಂನ ಆದಿತ್ಯ ಬಿರ್ಲಾ ವಿದ್ಯಾಲಯದ ನಿವೃತ್ತ ಚಿತ್ರಕಲಾ ಶಿಕ್ಷಕರಾದ ಡಾ. ಜಿ.ಜೆ. ಮೆಹೆಂದಳೆಯವರಿಗೆ ರಬೀಂದ್ರ ರತ್ನ ಪುರಸ್ಕಾರ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಐ.ಎಸ್.ಓ ಪ್ರಮಾಣಪತ್ರ ಹೊಂದಿರುವ ಭಾರತ ಸರಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ನೊಂದಾಯಿತ ವೆಯಿಲ್ ಫೌಂಡೇಶನ್ ರವರಿಂದ "2025 ರ ರಬೀಂದ್ರ ರತ್ನ ಪುರಸ್ಕಾರವನ್ನು ನೀಡಲಾಗಿದೆ ಎಂದು ಪ್ರಶಸ್ತಿಗಳ ಸಮಿತಿ ಮುಖ್ಯಸ್ಥ ಚಂದ್ರಶೇಖರ್ ಕೆ.ಎನ್., ರವರು ಘೋಷಿಸಿದ್ದಾರೆ.

ಇವರನ್ನು ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳ ಕಲಾವಿದರು ಎಂದು ದೆಹಲಿಯ ವೆಯಿಲ್ ಫೌಂಡೇಶನ್ ಛೇರಮನ್ ಝೂನ್ ಥಾಮಸ್ ಹಾಗೂ ಪ್ರಶಸ್ತಿಗಳ ಸಮಿತಿ ಮುಖ್ಯಸ್ಥ ಚಂದ್ರಶೇಖರ್ ಕೆ.ಎನ್. ರವರು 2025 ರ ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ.

# ಡಿಆರ್‌ಎಂ ವಿಜ್ಞಾನ ಕಾಲೇಜಿನಲ್ಲಿ ಕೊಲಾಜ್ ಸ್ಪರ್ಧೆ



ದಾವಣಗೆರೆ.ಅ.26: ನಗರದ ಡಿಆರ್‌ಎಂ ವಿಜ್ಞಾನ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ವತಿಯಿಂದ "ದಿನನಿತ್ಯಜೀವನದಲ್ಲಿರಸಾಯನಶಾಸ್ತ್ರ"ವಿಷಯದಮೇಲೆ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಕೊಲಾಜ್ ಸ್ಪರ್ಧೆ ಯಶಸ್ವಿಯಾಗಿ ನಡೆಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನಿವೃತ್ತ ಪ್ರಾಂಶುಪಾಲ ಜೆ.ಬಿ. ರಾಜ್ ಮಾತನಾಡಿ, ನಮ್ಮ ನಿತ್ಯ ಜೀವನದಲ್ಲಿ ವಿವಿಧ ರಸಾಯನಿಕ ಪದಾರ್ಥಗಳ ಪಾತ್ರ ಹಾಸು ಹೊಕ್ಕಾಗಿದೆ. ಇದು ಇಲ್ಲದೆ ಜೀವನವೇ ಇಲ್ಲ ಎಂದು ತಿಳಿಹೇಳಿದರು. ಇದೇ ಸಂದರ್ಭದಲ್ಲಿ ಅವರು ಕಾಲೇಜಿನ ಗ್ರಂಥಾಲಯಕ್ಕೆ ಸ್ಪರ್ಧಾ ಪರೀಕ್ಷೆಗಳಿಗೆ ಉಪಯೋಗ ಆಗುವ ರಸಾಯನ ಶಾಸ್ತ್ರದ ಹೊಸಪುಸ್ತಕಗಳನ್ನು ಕೊಡುಗೆಯಾಗಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಶ್ರೀಮತಿ ಎಂ.ಪಿ.ರೂಪಶ್ರೀ ಮಾತನಾಡಿ, ಕಾಲೇಜಿನಲ್ಲಿ ರಸಾಯನಶಾಸ್ತ್ರ ವಿಭಾಗ ದೊಡ್ಡದಾಗಿದ್ದು, ಇಲ್ಲಿರುವ ಎಲ್ಲಾ ಸೌಲಭ್ಯಗಳನ್ನು ಸದ್ಭಳಕೆ ಮಾಡಿಕೊಳ್ಳಲು ಕಿವಿ ಮಾತನ್ನು ಹೇಳುತ್ತಾ ಈ ಸ್ಪರ್ಧೆಯ ಉದ್ದೇಶ ವಿದ್ಯಾರ್ಥಿಗಳಿಗೆ ದಿನಪತ್ರಿಕೆ ಹಾಗೂ ಮಾಸಿಕ ಸಂಚಿಕೆ ಓದುವ ಅಭ್ಯಾಸಕ್ಕೆ ಉತ್ತೇಜನ ನೀಡುವುದೇ ಆಗಿದೆ ಎಂದರು.

ಸ್ಪರ್ಧೆಯಲ್ಲಿ ಡಿ. ಆರ್.ಎಂ. ವಿಜ್ಞಾನ ಕಾಲೇಜು, ದಾವಣಗೆರೆ ಪ್ರಥಮ ಮತ್ತು ಆರ್.ಟಿ.ಇ.ಎಸ್. ಕಾಲೇಜು, ರಾಣೇಬೆನ್ನೂರು ದ್ವಿತೀಯ ಸ್ಥಾನ ಪಡೆಯಿತು. ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಯೋಜಕ ಡಾ. ಮಂಜುರಾಜ್ .ಟಿ ವಿಭಾಗದ ಮುಖ್ಯಸ್ಥ ಡಾ. ವಸಂತ್ ಕುಮಾರ್ ಬಿ.ಸಿ., ಸಂಘಟನಾ ಸಂಚಾಲಕ ಡಾ. ಪ್ರಶಾಂತ್ ಕುಮಾರ್ ಪಿ.ಎನ್. ಹಾಗೂ ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಅಕ್ರಮ ಧಾನ್ಯ ಸಂಗ್ರಹ–ದಾಳಿ

ದಾ.ನಗರವಾಣಿ ಸುದ್ದಿ


ದಾವಣಗೆರೆ.ಅ.26: ಪಡಿತರ ವಿತರಣಾ ವ್ಯವಸ್ಥೆ ಅಡಿಯಲ್ಲಿ ಫಲಾನುಭವಿಗಳಿಗೆ ನೀಡಲಾಗುತ್ತಿದ್ದ ಅಕ್ಕಿ ಮತ್ತು ರಾಗಿಯನ್ನು ಅಕ್ರಮವಾಗಿ ಸಂಗ್ರಹಿಸಿಕೊಂಡಿದ್ದ ಸ್ಥಳಗಳ ಮೇಲೆ ದಾಳಿ ನಡೆಸಿ 10 ಕ್ವಿಂಟಲ್‌ಗೂ ಅಧಿಕ ಧಾನ್ಯ ವಶಪಡಿಸಿಕೊಳ್ಳಲಾಗಿದೆ.

ಭಾನುವಾರ ಕೆಟಿಜೆ ನಗರ, ಡಿಸಿಎಂ ಟೌನ್‌ಶಿಪ್ ಸೇರಿದಂತೆ ನಗರದ ಹಲವು ಕಡೆಗಳಲ್ಲಿ ಕಾಳಸಂತೆಕೋರರ ಮನೆ, ಗೋದಾಮುಗಳ ಮೇಲೆ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಹಾಗೂ ದಾವಣಗೆರೆ ಪೊಲೀಸ್ ಇಲಾಖೆಯ ಅಧಿಕಾರಿಗಳು ನಗರದ ವಿವಿಧ ಕಡೆಗಳಲ್ಲಿ ದಾಳಿ ನಡೆಸಿದಾಗ ಈ ಅಕ್ರಮ ದಾಸ್ತಾನು ಪತ್ತೆಯಾಗಿದೆ.

ಕೆಟಿಜೆ ನಗರದ ಮನೆಯೊಂದರಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ 9 ಕ್ವಿಂ ಅಕ್ಕಿ ಹಾಗೂ 1.68 ಕ್ವಿಂ ರಾಗಿ, ಡಿಸಿಎಂ ರಸ್ತೆ ಆಂಜನೇಯ ಬಡಾವಣೆ ಮನೆಯೊಂದರಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ 10.20 ಕ್ವಿಂ ಅಕ್ಕಿಯನ್ನು ಆಹಾರ ನಿರೀಕ್ಷಕ ಟಿ.ಮಂಜುನಾಥ ಪೊಲೀಸರೊಂದಿಗೆ ವಶಪಡಿಸಿಕೊಂಡಿದ್ದಾರೆ.

ಎರಡೂ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸರ್ವ ಸಮುದಾಯಕ್ಕೆ ವಾಲ್ಮೀಕಿ ಮರ್ಹಷಿ ಜೀವನವೇ ಪ್ರೇರಣದಾಯಕ: ಎಂ.ಡಿ.ಕೀರ್ತಿಕುಮಾರ್ ಅಭಿಮತ



ದಾ.ನಗರವಾಣಿ ಸುದ್ದಿ

ಜಗಳೂರು, ಅ.26: ಜಗತ್ತಿನಲ್ಲಿ ಜನಮನ ಗೆದ್ದ ಶ್ರೇಷ್ಠ ಗ್ರಂಥ ರಾಮಾಯಣ ಮಹಾಕಾವ್ಯ ರಚಿಸಿದ ವಾಲ್ಮೀಕಿ ಮಹರ್ಷಿ ಜೀವನವೇ ಸರ್ವ ಸಮುದಾಯಕ್ಕೂ ಪ್ರೇರಣದಾಯಕವಾಗಿದೆ ಎಂದು ಕೆಪಿಸಿಸಿಎಸ್‌ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಡಿ.ಕೀರ್ತಿಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಭಾನುವಾರ ತಾಲ್ಲೂಕಿನ ಸೊಕ್ಕೆ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಹಾಗೂ ವೀರ ಮದಕರಿ ನಾಯಕ ಜಯಂತಿಗಳ ಕಾರ್ಯಕ್ರಮದಲ್ಲಿ ವಾಲ್ಮೀಕಿ ಪುತ್ಥಳಿಗೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಸೊಕ್ಕೆ ಗ್ರಾಮದಲ್ಲಿ ನಾಯಕ ಸಮಾಜದೊಂದಿಗೆ ಸಹೋದರ ಸಮುದಾಯಗಳೂ ಜಯಂತಿ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದು ಸಾಮರಸ್ಯತೆಗೆ ಸಾಕ್ಷಿಯಾಗಿದೆ. ಸಂಜೆ ರಸಮಂಜರಿ ಕಾರ್ಯಕ್ರಮವೂ ಯಶಸ್ವಿಯಾಗಿ ನಡೆಸಿ, ಜಯಂತಿ ವೇಳೆ ಯಾವುದೇ ಅಚಾತುರ್ಯಗಳು ನಡೆಯದಂತೆ ನಿಗಾ ವಹಿಸಬೇಕು. ರಾಜನಹಳ್ಳಿ ಮಠದಿಂದ ವಾಲ್ಮೀಕಿ ಪುತ್ಥಳಿ ತಂದು ಪ್ರತಿವರ್ಷ ವಾಲ್ಮೀಕಿ ಜಯಂತಿ ಆಚರಣೆ ಗಮನಕ್ಕೆ ಬಂದಿದ್ದು, ಶಾಶ್ವತವಾಗಿರಲು ನನ್ನ ವೈಯಕ್ತಿಕವಾಗಿ ವಾಲ್ಮೀಕಿ ಪುತ್ಥಳಿ ನಿರ್ಮಿಸಿ ಕೊಡುವೆ ಎಂದು ಭರವಸೆ ನೀಡಿದರು.

ರಾಮಾಯಣ ಕಾವ್ಯದ ವೃತ್ತಾಂತಗಳು ಬದುಕಿನ ಜೀವನದ ಮೌಲ್ಯಗಳನ್ನು ಸಾರುತ್ತವೆ. ಸಹೋದರ, ಗಂಡ ಹೆಂಡಿರ, ತಂದೆ ತಾಯಿಯರ ಬಾಂಧವ್ಯ ಸಂಬಂಧಗಳನ್ನು ಗಟ್ಟಿಗೊಳಿಸುತ್ತಿದ್ದು. ಪ್ರತಿಯೊಬ್ಬರೂ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಶೋಷಿತ ಸಮುದಾಯಗಳು ಸಂವಿಧಾನ ಬದ್ಧ ಹಕ್ಕುಗಳನ್ನು ಸದುಪಯೋಗ ಪಡೆದುಕೊಂಡು ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ ಸಮಾಜದಲ್ಲಿ ಮುನ್ನಲೆಗೆ ಬರಬೇಕಿದೆ. ದೇಶದಲ್ಲಿ ಎಲ್ಲಾ ವರ್ಗಗಳಿಗೆ ಸಮಾನತೆ ಸಾರುವ ಸಂವಿಧಾನ, ಪ್ರಜಾಪ್ರಭುತ್ವ ಉಳಿಸಬೇಕಿದೆ ಎಂದು ಕರೆ ನೀಡಿದರು.

ನನ್ನ ತಂದೆ ಶಾಸಕ ಬಿ.ದೇವೇಂದ್ರಪ್ಪ ಅವರ ಗಮನಕ್ಕೆ ತಂದು ಗ್ರಾಮೀಣ ಭಾಗದಲ್ಲಿ ಚರಂಡಿ, ರಸ್ತೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳ ಪೂರೈಕೆಗೆ ಆದ್ಯತೆ ನೀಡಲಾಗುವುದು. ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ಸರಕಾರದ ಗ್ಯಾರಂಟಿ ಯೋಜನೆಗಳು ಬಡವರ್ಗಕ್ಕೆ ವರದಾನವಾಗಿವೆ. ತಾಲ್ಲೂಕಿನಲ್ಲಿ ಕೆರೆಗಳು ಭರ್ತಿಯಾಗಿದ್ದು, ಅಂತರ್ಜಲ ಹೆಚ್ಚಳವಾಗಿ ಭವಿಷ್ಯದಲ್ಲಿ ರೈತರ ಬದುಕು ಹಸನಾಗಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಹರೀಶ್ ಕೆಚ್ಚೇನಹಳ್ಳಿ, ಕ್ಯಾಸೇನಹಳ್ಳಿ ರಮೇಶ್, ಸೊಕ್ಕೆ ಪರುಶರಾಮ್, ಸಿದ್ದಮ್ಮ, ರಾಜಪ್ಪ ಸೇರಿದಂತೆ ಇತರರು ಗ್ರಾಮಸ್ಥರು ಇದ್ದರು.

# ಮಲೆಬೆನ್ನೂರಲ್ಲಿ ಆರೆಸ್ಸೆಸ್ ಪಥ ಸಂಚಲನ



ದಾ ನಗರವಾಣಿ ಸುದ್ದಿ

ಮಲೇಬೆನ್ನೂರು: ಹಿಂದೂ ಸಮಾಜದ ಸಂಘಟನೆ ಮಾಡುವ ಮೂಲ ಉದ್ದೇಶದಿಂದ ಹುಟ್ಟಿದ ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ 100 ವರ್ಷಗಳಾಗಿವೆ. ದೇಶದಲ್ಲಿ ಸಾಮಾಜಿಕ ಪರಿವರ್ತನೆ ತರುವುದರ ಜೊತೆಗೆ ಅಸ್ಪೃಶ್ಯತೆ ಹೋಗಲಾಡಿಸುವಲ್ಲಿ ದೊಡ್ಡ ಕೊಡುಗೆ ಕೊಟ್ಟಿದೆ ಎಂದು ಆರೆಸ್ಸಸ್ ಶಿವಮೊಗ್ಗ ಜಿಲ್ಲಾ ಸಹಕಾರ್ಯನಿರ್ವಾಹ ಮಧುಕರ್ ಮತ್ತೂರು ಹೇಳಿದರು.

ಅವರು ಮಲೇಬೆನ್ನೂರಿನ ನೀರಾವರಿ ಇಲಾಖೆಯ ಮೈದಾನದಲ್ಲಿ ಶನಿವಾರ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಾಬ್ದಿ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಶಾಖೆಗೆ ಯಾರೇ ಆಗಲಿ ಒಂದು ದಿನ ಬಂದರೂ ಅವರು ಜೀವನಪರ್ಯಂತ ದೇಶಭಕ್ತನಾಗುತ್ತಾನೆ ಅಂತಹ ಶಕ್ತಿಯು ಜನ್ಮಜಾತ ದೇಶಭಕ್ತ ಕೇಶವ್ ಬಲಿರಾಮ ಹೆಡ್ಗೆವಾರ್ ಸ್ಥಾಪಿಸಿರುವ ಸಂಘಕ್ಕೆ ಮತ್ತು ಭಗವಾಧ್ವಜ ಎಂದರು,

ಆರ್.ಎಸ್.ಎಸ್. ಸಂಘಟನೆಯ ಶತಮಾನೋತ್ಸವ ಪ್ರಯುಕ್ತ ದೇಶಾದ್ಯಂತ ಎಲ್ಲಾ ತಾಲ್ಲೂಕುಗಳಲ್ಲಿ ಯುವಕರ ಸಮಾವೇಶ ಮಾಡುತ್ತೇವೆ. "ಮನೆ ಮನೆ ಸಂಪರ್ಕ" ಅಭಿಯಾನ ಮಾಡುತ್ತೇವೆ. ಅಭಿಯಾನದ ವೇಳೆ ಕರಪತ್ರ, ಭಾರತ ಮಾತೆಯ ಸ್ಟಿಕ್ಕರ್‌ನ್ನು ಎಲ್ಲಾ ಮನೆಗಳಿಗೂ ತಲುಪಿಸುವ ಕಾರ್ಯ ಮಾಡಲಾಗುವುದು. ಶಾಲಾ ಮೈದಾನ ಮತ್ತಿತರ ಕಡೆ ನಮ್ಮನ್ನು ಬಂಧನ ಮಾಡಲು ನೋಡುತ್ತಿದ್ದೀರಿ. ನಾವು ಅಲ್ಲಿಲ್ಲ. ನಾವಿರುವುದು ನಮ್ಮ ನಡವಳಿಕೆಯಲ್ಲಿ ಮತ್ತು ಪ್ರತಿಯೊಬ್ಬ ದೇಶಭಕ್ತನ ಮನಸ್ಸಿನಲ್ಲಿ ಎಂದರು.

ಮುಂದಿನ ವರ್ಷ ಎಲ್ಲಾ ಪಂಚಾಯಿತಿಗಳಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಹಿಂದೂ ಸಮ್ಮೇಳನ ಮಾಡಿ ಹಿಂದೂ ಸಮಾಜವನ್ನು ಒಗ್ಗೂಡಿಸುತ್ತೇವೆ. ಎಲ್ಲಾ ಜಾತಿಗಳ ನಡುವೆ ಸದ್ಭಾವನೆ ಮೂಡಿಸುವಂತಹ ಸದ್ಭಾವನೆ ಕಾರ್ಯಕ್ರಮ ಮಾಡುತ್ತೇವೆ ಎಂದರು.

ಈ ದೇಶದ ಸಂವಿಧಾನದ ಬಗ್ಗೆ ಸಂಘಕ್ಕೆ ಹೆಚ್ಚಿನ ಗೌರವವಿದೆ. ಅಸ್ಪೃಶ್ಯತೆ ನಿವಾರಿಸಲು ಸಂಘ ಶ್ರಮಿಸುತ್ತಿದೆ. ಪರಿಸರ ಸಂರಕ್ಷಣೆ, ಹಿಂದೂ ಕುಟುಂಬ ಪದ್ಧತಿ ರಕ್ಷಣೆ, ಸ್ವದೇಶಿ ಆಚರಣೆ ಮುಂತಾದ ಹತ್ತಾರು ಸಾಮಾಜಿಕ ಸೇವೆಗಳನ್ನು ಸಂಘ ಮಾಡುತ್ತಿದೆ ಎಂದರು.

ಕಾರ್ಯಕ್ರಮಕ್ಕೂ ಮೊದಲು ಸುಮಾರು 400 ಆರ್‌ಎಸ್‌ಎಸ್ ಸ್ವಯಂ ಸೇವಕರು ಪಟ್ಟಣದ ರಾಜಬೀದಿಗಳಲ್ಲಿ ಪಥಸಂಚಲನ ನಡೆಸಿದರು. ಈ ವೇಳೆ ಶಾಸಕ ಬಿಪಿ ಹರೀಶ್, ಜೆಡಿಎಸ್. ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ, ಜಿಪಂ ಮಾಜಿ ಅಧ್ಯಕ್ಷ ಹನಗವಾಡಿ ವೀರೇಶ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಹಿಂಡಸಘಟ್ಟ ಲಿಂಗರಾಜ್, ರಾಜು ರೋಖಡೆ, ಐರಣಿ ಅಣ್ಣಪ್ಪ, ಬೆಣ್ಣೆಹಳ್ಳಿ ಸಿದ್ದೇಶ್, ಮುದೇಗೌಡ್ರ ತಿಪ್ಪೇಶ್, ಕುಣೆಬೆಳಕೆರೆ ರಾಮು, ಹಳ್ಳೂರು ವಿಶ್ವನಾಥ್, ಹೊಸಳ್ಳಿ ಕರಿಬಸವ, ನಿರಂಜನ್, ಜಿಗಳಿ ಹನುಮೌಡ, ಪ್ರದೀಪ್, ಪ್ರತಾಪ್, ಕಜ್ಜರಿ ಹರೀಶ್, ಶಿವಾನಂದಪ್ಪ, ಜಿಲ್ಲಾ ಸಂಘ ಸಂಚಾಲಕ ಜಯರುದ್ರೇಶ್, ಆರ್‌ಎಸ್‌ಎಸ್ ಹರಿಹರ ತಾಲ್ಲೂಕು ಕಾರ್ಯವಾಹ ಉಮೇಶ್, ಕೊಮಾರನಹಳ್ಳಿ ಸುನೀಲ್, ಅನೇಕ ಬಿಜೆಪಿ ಮುಖಂಡರು, ಸ್ವಯಂ ಸೇವಕರು ಮಕ್ಕಳೂ ಸಹ ಪಥಸಂಚಲನ ಹಾಗೂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಆರ್‌ಎಸ್‌ಎಸ್ ಪಥಸಂಚಲನ ವೇಳೆ ಸಂಘ ಸಂಸ್ಥೆಗಳ ಸದಸ್ಯರು ಸಂಘದ ಸ್ವ–ಯಂ ಸೇವಕರ ಮೇಲೆ ಪುಷ್ಪಾರ್ಚನೆ ಮಾಡುವ ಮೂಲಕ ಶುಭ ಹಾರೈಸಿದರು.

ದಾವಣಗೆರೆ ಡಿವೈಎಸ್ಪಿ, 3 ವೃತ್ತ ನಿರೀಕ್ಷಕರು, 6 ಉಪನಿರೀಕ್ಷಕರು, 11 ಎ.ಎಸ್.ಐ, 65ಸಿಬ್ಬಂದಿ ಮತ್ತು 1 ಡಿ.ಆರ್. ವ್ಯಾನಗಳೊಂದಿಗೆ ಬಂದುಬಸ್ತು ಮಾಡಲಾಗಿತ್ತು ಎಂದು ಮಲೇಬೆನ್ನೂರು ಪಿ.ಎಸ್.ಐ. ಹಾರೂನ್ ಅಖ್ತರ್ ತಿಳಿಸಿದರು.

# ಜಿಲ್ಲಾ ಕ್ರೀಡಾಕೂಟದಲ್ಲಿ ಸುಧಾಕರ್, ರಘುಮೂರ್ತಿ



ದಾ ನಗರವಾಣಿ ಸುದ್ದಿ

ಚಿತ್ರದುರ್ಗ: ನಗರದ ವೀರವನಿತೆ ಒನಕೆ ಓಬವ್ವ ಕ್ರೀಡಾಂಗಣದಲ್ಲಿ ನಡೆದ 14,17 ವರ್ಷ ವಯೋಮಿತಿಯೊಳಗಿನ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ಬಾಲಕ, ಬಾಲಕಿಯರ ಜಿಲ್ಲಾ ಮಟ್ಟದ ಮೇಲಾಟಗಳ ಕ್ರೀಡಾಕೂಟದಲ್ಲಿ ಸಚಿವ ಡಿ ಸುಧಾಕರ್ ಹಾಗೂ ಶಾಸಕ ಟಿ. ರಘುಮೂರ್ತಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಸಮಿತಿಯ ಅಧ್ಯಕ್ಷರಾದ ಶಿವಣ್ಣ, ಸಾರ್ವಜನಿಕ ಶಿಕ್ಷಣ ಉಪನಿರ್ದೇಶಕ ಮಂಜುನಾಥ್, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಹೆಸರು ಬದಲಾವಣೆ**

ನಾನು, ಕಿರಡಿ ಶ್ರೀಕಲ, ವಾಸ : # 539, ಪಂಚವಟಿ ನಿಲಯ, ಅಭಿರುಚಿ ಹೋಟೆಲ್ ಹತ್ತಿರ, ಹರಪನಹಳ್ಳಿ, ವಿಜಯನಗರ ಜಿಲ್ಲೆಯ ವಾಸಿಯಾದ ನಾನು ದೇವರ ಹೆಸರಿನಲ್ಲಿ ಪ್ರಮಾಣೀಕರಿಸುವುದೇನೆಂದರೆ, ನನ್ನ ಹಳೆಯ ಹೆಸರು ಕಿರಣ್ ಶ್ರೀಕಲ (Kiran Srikala) ಎಂಬುದಾಗಿದ್ದು, ಇನ್ನು ಮುಂದೆ ನನ್ನ ಹೆಸರನ್ನು ಹೊಸ ಹೆಸರು **ಕಿರಡಿ ಶ್ರೀಕಲ** (KIRADI SRIKALA) ಎಂದು ಬದಲಾಯಿಸಿರುವುದಾಗಿ ದಿ: 18.10.2025 ರಂದು ವಿಜಯನಗರ ಜಿಲ್ಲೆ, ಹರಪನಹಳ್ಳಿ ನೋಟರಿ ಎಸ್.ಡಿ. ಗೋಪಿನಾಥ್ ವಕೀಲರ ಬಳಿ ಪ್ರಮಾಣೀಕರಿಸಿರುತ್ತೇನೆ.

– **ಕಿರಡಿ ಶ್ರೀಕಲ**

**Site for sale**

Semi commercial cum Residential site for sale, 1st main, 3rd cross, beyond petrol bunk, Hadadi Road, Taralabalu Balu Badavane, Davangere. Dimension; (69.5+25.5)/2 + (60 + 74)/2 = 3182.5 sft.

M.no: 9380285425

Brokers please excuse.